Mr. SPEAKER.—I will deal with it later. There is no time for it now.

Sri C. J. MUCKANNAPPA.—If I am entitled to ask......

Mr. SPEAKER.—The member is not entitled to ask on the Floor of the House and there is no time for it also.

SUPPLEMENTARY AND ADDITIONAL DEMANDS FOR GRANTS (FIRST INSTALMENT) FOR 1965-66.

(General Discussion.)

Mr. SPEAKER.—Who commences the Debate on the Supplementary Estimate? We have got only one hour for the whole discussion.

HON'BLE MEMBERS.—One hour will not be sufficient.

Mr. SPEAKER.—We have also got a number of other Bills. However, I will try to give as much time as possible to the members of the Opposition.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಧ್ಯಕ್ಷರೇ, 1965-66ನೇ ಸಾಲಿನಲ್ಲಿ ಮೊದಲನೇ ಇನ್‌ಸ್ಟಾಲ್‌ಮೆಂಟಾಗಿ ಸಪ್ಲಿಮೆಂಟರಿ ಎಸ್ಟಿಮೇಟುಗಳೆಂದು ಒಂದು ಡಿಮ್ಯಾಂಡನ್ನು ನಮ್ಮ ಆರ್ಥಿಕ ಸಚಿವರು ಈ ಮಾನ್ಯ ಸಭೆಯ ಮುಂದೆ ಮಂಡಿಸಿದ್ದಾರೆ. 1965-66ನೇ ಸಾಲಿನಲ್ಲಿ ಬಡ್ಜೆಟ್ಟನ್ನು ಮಂಡಿಸಿದ ಆರ್ಥಿಕ ಸಚಿವರು ಒಬ್ಬರು. ಈಗ ಸಪ್ಲಿಮೆಂಟರಿ ಎಸ್ಟಿಮೇಟುಗಳು ಎಂದು ಮಂಡಿಸುತ್ತಿರುವ ಆರ್ಥಿಕ ಸಚಿವರು ಬೇರೊಬ್ಬರು ಬಂದಿದ್ದಾರೆ. ಅವರು ಬಂದ ಕಾಲದಲ್ಲಿ ದೇಶ ದಲ್ಲಿ ಎಂತಹ ಯುದ್ಧ ಪರಿಸ್ಥಿತಿ ಇತ್ತು ಎನ್ನುವುದು ನಿನ್ನೆ ನಮ್ಮ ಮಾನ್ಯ ಮಂತ್ರಿಗಳೇ ಹೇಳಿದಂತೆ ದೇಶ ಒಂದು ಬಿಗಡಾಯಿಸಿದ ಪರಿಸ್ಥಿತಿಯಲ್ಲಿತ್ತು. ಇಂತಹ ಬಿಗಡಾಯಿಸಿದ ಹಾಗೂ ಗಂಡಾಂತರ ಪರಿಸ್ಥಿತಿಯಲ್ಲಿ ನಮ್ಮ ದೇಶದ ಕಾನೂನು ಹಾಗೂ ಇತರ ಕ್ಷೇತ್ರಗಳಲ್ಲಿಯೂ ಕೂಡ ನಮ್ಮ ಹಣಕಾಸಿನ ಪರಿಸ್ಥಿತಿಯು ಡಿಫೆನ್ಸ್ ಓರಿಯಂಟೇಟೆಡ್ ಎಂದರೆ ರಕ್ಷಣಾ ವ್ಯವಸ್ಥೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡತಕ್ಕ ಕಾಲ ಬಂದಿರುವಾಗ ನಮ್ಮ ಹಣಕಾಸಿನ ಸಚಿವರು ಇಂತಹ ಒಂದು ಹೆಚ್ಚುವರಿ ಬೇಡಿಕೆಗಳ ಸೂಚನೆಯನ್ನು ತಂದಿರುವುದು ಯಾವರೀತಿ ಇದೆ ಎನ್ನುವುದನ್ನು ನೋಡಬೇಕಾಗಿದೆ. ಈ ದೃಷ್ಟಿ ಯಿಂದ ನಾವು ನೋಡುವುದಾದರೆ, ನಮ್ಮ ಈ ಸಪ್ಲಿಮೆಂಟರಿ ಡಿಮ್ಯಾಂಡುಗಳ ಪಟ್ಟಿಯನ್ನು ನೋಡಿ ದರೆ ಎಷ್ಟುಮಟ್ಟಿಗೆ ದೇಶದ ಯುದ್ಧದ ಪರಿಸ್ಥಿತಿಗೆ ಹೊಂದಿಕೊಂಡಿದೆ ಎಂದರೆ, ಇದರಲ್ಲಿರುವ ಯಾವ ಸೂಚನೆಗಳೇ ಆಗಲಿ ಒಂದೂ ಕೂಡ ಡಿಫೆನ್ಸ್ಓರಿಯಂಟೇಟೆಡ್ ನೀತಿಗನುಗುಣವಾದಂತಹ ತತ್ವಗಳನ್ನು ಒಳಗೊಂಡಿಲ್ಲ ಎನ್ನುವುದು ಸ್ಪಷ್ಟವಾಗಿ ಇಲ್ಲಿ ಕಾಣುತ್ತದೆ. ಇಲ್ಲಿರುವ ಸಪ್ಲಿಮೆಂಟರಿ ಡಿಮ್ಯಾಂಡು ಗಳ ಪಟ್ಟಿಯ ಪೇಜುಗಳನ್ನು ತಿರುವಿ ಹಾಕಿ ನೋಡಿದೆ. ಅದರಲ್ಲಿರುವ ಕೆಲವು ಅಂಶಗಳನ್ನು ನೋಡಿ ದರೆ ತುರ್ತು ಪರಿಸ್ಥಿತಿಯಲ್ಲಿ ಇಂತಹ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ಕೇಳತಕ್ಕದ್ದು ಸರಿಯೇ ಹಾಗೂ ಒಂದಕ್ಕೊಂದು ಹೊಂದಾಣಿಕೆ ಇದೆಯೇ ಎಂದು ನಾನು ಆರ್ಥಿಕ ಸಚಿವರನ್ನು ಕೇಳಬಯಸು ತ್ತೇನೆ. ತಾವು ಜನರಲ್ ಅಡ್ಮಿನಿಸ್ಟ್ರೇಷನ್ ಬಾಬಿನಲ್ಲಿ ಕೆಲವು ಕಾರುಗಳನ್ನು ಕೊಂಡುಕೊಳ್ಳುವುದ ಕ್ಕಾಗಿ ಸುಮಾರು ಎರಡೂಕಾಲು ಲಕ್ಷ ರೂಪಾಯಿಗಳಷ್ಟು ಹಣಬೇಕೆಂದು ಇಲ್ಲಿ ಕೇಳಿದ್ದೀರಿ. ಮಂತ್ರಿಗಳು ಹೇಳುತ್ತಿರುವ ಮಿತವ್ಯಯ ನೀತಿಯ ಮತ್ತು ಅವರ ಒಂದು ವೈಭವಕ್ಕಾಗಿ ಒಂದೊಂದು ಕಾರಿಗೂ 30-40 ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿ ಬಾಯಲ್ಲಿ ತುರ್ತು ಪರಿಸ್ಥಿತಿ ದೇಶದಲ್ಲಿದೆ ಎಂದು ಹೇಳುವುದಕ್ಕೂ ಹೇಗೆ ಹೊಂದಾಣಿಕೆ ಆಗುತ್ತದೆ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ವಿವರಿಸಿ ನಮಗೆ ತಿಳಿಸಬೇಕಾಗಿದೆ. ಏನೇ ಆಗಲಿ ಇದಂತೂ ಬಹಳ ವಿಷಾದನೀಯವಾದ ಸಂಗತಿ. ಒಂದು ಕಡೆ ದೇಶದಲ್ಲಿ ತುರ್ತು ಪರಿಸ್ಥಿತಿ ಇದೆ ಎಂದು ಹೇಳುತ್ತಾ ಇನ್ನೊಂದು ಕಡೆ ಮಂತ್ರಿಗಳ ವೈಭವಕ್ಕಾಗಿ ಒಂದೊಂದು ಕಾರಿಗೆ 30-40 ಸಾವಿರರೂಪಾಯಿಗಳನ್ನು ಖರ್ಚುಮಾಡಿರತಕ್ಕ ನೀತಿಯನ್ನು ನಾನು ಬಹಳ ವಿಷಾದನೀಯಕರ ಸಂಗತಿಯೆಂದು ಭಾವಿಸದೆ ವಿಧಿ ಯಿಲ್ಲ. ಇಂಥ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಮಂಡಿಸತಕ್ಕ ವಿಚಾರಗಳೂ ಇರುತ್ತವೆ; ಆದರೆ ಇಂಥ ದುಂದು ವೆಚ್ಚಗಳನ್ನಲ್ಲ. ಅದಕ್ಕೆಲ್ಲಾ ನಿಯಮಾವಳಿಗಳಿವೆ. ಮಾನ್ಯ ಸಚಿವರು ದೇಶದಲ್ಲಿ ತುರ್ತು

ಪರಿಸ್ಥಿತಿಯೆಂದು ಹೇಳುವುದಕ್ಕೆ ಪ್ರಾರಂಭವಾದನಂತರ ಜನರಲ್ ಅಡ್ಮಿನಿಸ್ಟ್ರೇಷನ್ ಬಾಬಿನಲ್ಲಿ ಎಷ್ಟು ಹಣವನ್ನು ಉಳಿತಾಯಮಾಡಿದ್ದಾರೆಂದು ಒಂದು ಪ್ರಶ್ನೆಯನ್ನು ಕೇಳಬೇಕಾಗಿದೆ. ಬಡ್ಜೆಟ್ ಅಧಿವೇಶನದಲ್ಲಿ ಕೇಳಿದ್ದ ವೆಚ್ಚಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡಿದ ಮೇಲೆ ಅದನ್ನು ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಸೇರಿಸಲೇ ಬೇಕು. ಆದರೆ ಅದಕ್ಕೂ ನೀತಿ ನೇಮಗಳು ಬೇಡವೇ? ತಾವು ಆರ್ಥಿಕ ಸಚಿವರಾದ ಮೇಲೆ ನಮ್ಮ ದೇಶಕ್ಕೆ ಒಬ್ಬ ಫೈನಾನ್ಷಿಯಲ್ ಆಡ್ವೈಜರನ್ನು ಬೇರೆ ನೇಮಕ ಮಾಡಿಕೊಳ್ಳಲಾಗಿದೆ. ಆದರೆ ಅಂಥ ಅಗತ್ಯ ಏನಿತ್ತು ಎಂಬುದನ್ನು ತಿಳಿಸಿಲ್ಲ. ಮೇಲಾಗಿ ಆ ಹೆಚ್ಚುವಳಿಯ ಖರ್ಚನ್ನು ಈ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಹಾಕಬೇಕಾಗಿತ್ತು. ಆದರೆ ಅದನ್ನೇಕೋ ಕೈಬಿಟ್ಟಿರುವಂತೆ ಕಾಣುತ್ತಿದೆ. ಆ ಖರ್ಚು ಇದರಲ್ಲೆಲ್ಲೂ ಇದ್ದಂತೆ ನನಗೆ ಕಂಡುಬರಲಿಲ್ಲ. ಈ ದಿವಸ ಸರ್ಕಾರದವರು ನೇಮಕ ಮಾಡಿಕೊಂಡಿರತಕ್ಕ ಫೈನಾನ್ಷಿಯಲ್ ಅಡ್ವೈಜರ ಸಂಬಳ ಸಾರಿಗೆಗಳೇನು, ಅವರನ್ನೇಕೆ ತರಬೇಕಾಗಿತ್ತು, ಅವರನ್ನು ಯಾವ ಷರತ್ತಿನಮೇಲೆ ನೇಮಕ ಮಾಡಿಕೊಳ್ಳಲಾಗಿದೆ, ಅವರ ಅವಧಿಯೇನು ಎಂಬ ವಿವರಗಳೊಂದೂ ಗೊತ್ತಿಲ್ಲ. ಪ್ರತಿಯೊಂದು ವಿಭಾಗದಲ್ಲೂ ಮಿತವ್ಯಯವನ್ನು ಆಚರಿಸಬೇಕೆಂದು ಬಾಯಲ್ಲಿ ಹೇಳುತ್ತಾ ಸರ್ಕಾರದವರು ಹೀಗೆ ಅನೇಕ ಹೊಸ ಹೊಸ ಇಲಾಖೆಗಳನ್ನು ಮಾಡುತ್ತಿರುವುದು ಮಿತವ್ಯಯದ ಸೂಚನೆಯೇ ಎಂದು ಕೇಳುತ್ತೇನೆ. ಸರ್ಕಾರದವರು ಆಚರಿಸತಕ್ಕ ನೀತಿ ಮಿತವ್ಯಯ ಸಾಧನೆಗೆ ಸರಿಯಾದ ಮಾರ್ಗವೇ ಎಂದು ಕೇಳುತ್ತೇನೆ.

[MR. DEPUTY SPEAKER in the Chair]

ಈ ದಿವಸ ಸರ್ಕಾರದವರು ತಮ್ಮ ಈ ವಿಚಿತ್ರ ನೀತಿಯನ್ನು ಹೇಗೆ ಪ್ರತಿಪಾದಿಸುತ್ತಾರೆ, ಹೇಗೆ ಸಮರ್ಥನೆ ಮಾಡುತ್ತಾರೆ ಎಂಬುದು ಬಹಳ ಆಶ್ಚರ್ಯಕರವಾದ ಸಂಗತಿಯಾಗಿದೆ. ನಮ್ಮ ರಾಜ್ಯದ ಹಣಕಾಸಿನ ಸುಭದ್ರತೆಯನ್ನು ನೋಡಿಕೊಳ್ಳುವುದಕ್ಕೆ ನಮ್ಮಲ್ಲಿ ಅಂಥ ದಕ್ಷರೂ, ಪರಿಣತರಾದವರು ತಜ್ಞರೂ ಯಾರೂ ಇರಲಿಲ್ಲವೇ? ಮಂತ್ರಿಗಳು ತಮ್ಮ ಸ್ವಂತ ಇಚ್ಛೆಯಮೇಲೆ ಈ ಹುದ್ದೆಯನ್ನು ಸ್ಥಾಪಿಸಿದರೇ ಅಥವಾ ಕೇಂದ್ರ ಸರ್ಕಾರದವರಿಂದ ಮೈಸೂರಿನ ಹಣಕಾಸಿನ ವ್ಯವಸ್ಥೆಯು ಸರಿಯಾಗಿಲ್ಲ, ಮೈಸೂರು ಸರ್ಕಾರಕ್ಕೆ ಹಣಕಾಸಿನ ವ್ಯವಹಾರದಲ್ಲಿ ಅಷ್ಟು ಪರಿಶ್ರಮವಿಲ್ಲ ಅದಕ್ಕಾಗಿ ಒಬ್ಬ ಅಡ್ವೈಜರನ್ನು ಇಟ್ಟುಕೊಳ್ಳಬೇಕೆಂದು ಅವರಿಂದ ಒಂದು ಆದೇಶವೇನಾದರೂ ಬಂದು ಅದರ ಪ್ರಕಾರ ಅವರನ್ನು ಇಟ್ಟುಕೊಳ್ಳಲಾಯಿತೇ ಎಂಬುದಕ್ಕೆ ವಿವರಣೆಯನ್ನು ಉತ್ತರ ಕೊಡತಕ್ಕ ಕಾಲದಲ್ಲಿ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ. ನಮ್ಮ ಹಣಕಾಸಿನ ಇಲಾಖೆಯಲ್ಲೇ ದಕ್ಷರಾದಂಥ ಅಧಿಕಾರಿಗಳಿರುವಾಗ ಹೊರಗಿನವರನ್ನು ಕರೆಸಬೇಕಾದ ಅಗತ್ಯವೇನಿತ್ತು ಎಂಬುದನ್ನು ದಯಮಾಡಿಟ್ಟು ತಿಳಿಸಬೇಕು. ನಮ್ಮ ಹಣಕಾಸಿನ ಇಲಾಖೆಯಲ್ಲೇ ಅನೇಕ ದಕ್ಷ ಅಧಿಕಾರಿಗಳಿದ್ದಾರೆ. ಈ ಕಾರ್ಯಕ್ಕೆ ಅವರ ಸೇವೆಯನ್ನೆ ಉಪಯೋಗ ಮಾಡಿಕೊಳ್ಳಬಹುದಿತ್ತು. ಇಲ್ಲಿರತಕ್ಕ ದಕ್ಷರನ್ನು ಕೈಬಿಟ್ಟು ಬೇರೆ ಕಡೆಯಿಂದ ಜನರನ್ನು ಇಲ್ಲಿಗೆ ತರತಕ್ಕದ್ದು ಸರಿಯಲ್ಲ. ಇಲ್ಲಿರತಕ್ಕವರು ಉತ್ಸಾಹದಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ. ಇದರಿಂದ ಒಂದು ತಾರತಮ್ಯ ಭಾವನೆ ಬೆಳೆಯುವುದಕ್ಕೆ ನಾವೇ ಅವಕಾಶ ಮಾಡಿಕೊಟ್ಟಹಾಗಾಗುತ್ತದೆ. ಆದಕಾರಣ ಈ ಹುದ್ದೆಗೆ ಹೊರಗಿನವರನ್ನು ತರತಕ್ಕದ್ದು ಅಷ್ಟು ಶ್ಲಾಘನೀಯವಲ್ಲ ಎಂಬ ಅಂಶವನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ.

ಮಾನ್ಯ ಸಭಾಪತಿಗಳೇ, ಇದೇ ರೀತಿಯಲ್ಲಿ ಇನ್ನೂ ಆನೇಕ ಕಡೆಗಳಲ್ಲಿ ಹೊಸ ಇಲಾಖೆಗಳನ್ನು ನಿರ್ಮಾಣಮಾಡಿದ್ದಾರೆ. ಲೋಕೋಪಯೋಗಿ ಶಾಖೆಯಲ್ಲೂ ಒಂದು ದೊಡ್ಡ ಹೊಸ ಹುದ್ದೆಯನ್ನು ನಿರ್ಮಾಣ ಮಾಡಿದ್ದಾರೆ. ಪ್ರಾಜೆಕ್ಟ್‌ಗಳ ಇನ್‌ವೆಸ್ಟಿಗೇಷನ್‌ಗಿಂತ ಒಬ್ಬ ಚೀಫ್ ಇಂಜನೀಯರ ಹುದ್ದೆಯನ್ನು ನಿರ್ಮಿಸಿ ಅದಕ್ಕೆ ಬೇರೆ ಅನೇಕ ಎಗ್ಜಿಕ್ಯುಟೀವ್ ಇಂಜಿನಿಯರುಗಳನ್ನೂ ಸೂಪರಿಂಟೆಂಡಿಂಗ್ ಇಂಜಿನಿಯರನ್ನೂ ಹೀಗೆ ಒಂದು ದೊಡ್ಡ ಸಿಬ್ಬಂದಿ ವರ್ಗವನ್ನೇ ನೇಮಕ ಮಾಡಿದ್ದಾರೆ. ನಮ್ಮ ದೇಶದಲ್ಲಿ ಹಣದ ಕೊರತೆಯಿರುವಾಗ ಮೊನ್ನೆ ತಾನೆ ನಮ್ಮ ಮುಖ್ಯಮಂತ್ರಿಗಳು ದೇಶದಲ್ಲಿ ಸಧ್ಯಕ್ಕೆ ಯಾವ ಹೊಸ ಕೆರೆಗಳ ಕೆಲಸವನ್ನೂ ಕೈಗೊಳ್ಳುವುದಕ್ಕೆ ಸಾಧ್ಯವಿಲ್ಲ, ಇರತಕ್ಕ ಹಳೆಯ ಕೆರೆಗಳನ್ನೇ ಜೀರ್ಣೋದ್ಧಾರ ಮಾಡಬೇಕಾಗಿದೆ ಎಂದು ಹೇಳಿದ್ದಾರೆ. ಮುಂದೆ ಬೇಕಾದರೆ ಹೊಸ ಕೆರೆಗಳನ್ನು ನೋಡೋಣ ಎಂದು ಹೇಳಿದ್ದರು. ಹಾಗಿರುವಾಗ ಹಣದ ಕೊರತೆ ಇದೆಯೆಂದು ಬಾಯಲ್ಲಿ ಹೇಳುತ್ತಾ ಹೀಗೆ ಹೊಸ ಹೊಸ ಇಲಾಖೆಗಳನ್ನೂ ಅದಕ್ಕೆ ಒಂದು ದೊಡ್ಡ ಸಿಬ್ಬಂದಿವರ್ಗವನ್ನೂ ನೇಮಕ ಮಾಡತಕ್ಕದ್ದು ಯಾವ ನೀತಿ? ದೇಶದಲ್ಲೆಲ್ಲಾ ದುಂದು ವೆಚ್ಚವನ್ನು ಕಡಮೆ ಮಾಡಬೇಕೆಂದು ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೂ ನಮ್ಮ ಮುಖ್ಯಮಂತ್ರಿಗಳು ಸೂಚನೆಯನ್ನು ಕೊಡುತ್ತಿದ್ದಾರೆಂದು ನಾವು ಪತ್ರಿಕೆಗಳಲ್ಲಿ ನೋಡುತ್ತಿರುವಾಗ ಹೀಗೆ, ಸರ್ಕಾರದವರು ರಾಜ್ಯ ಮಟ್ಟದಲ್ಲಿ ಇರತಕ್ಕ ಸಿಬ್ಬಂದಿಯಲ್ಲೇ ಕೆಲಸವನ್ನು ನಡೆಸದೆ ಹೊಸ ಇಲಾಖೆಗಳನ್ನು ಸ್ಥಾಪಿಸುವುದು ಯಾವ ನ್ಯಾಯ?

(ಶ್ರೀ ಎಸ್. ಶಿವಪ್ಪ)

ಮಾನ್ಯ ಸಭಾಪತಿಗಳೇ, ನಾವು ದೇಶದಲ್ಲಿ ತುರ್ತು ಪರಿಸ್ಥಿತಿಯುಂಟಾಗಿದೆಯೆಂದು ಎಲ್ಲ ಜನರೂ ಸರ್ವ ತ್ಯಾಗಕ್ಕೂ ಸಿದ್ಧರಾಗಿರುವಾಗ, ಇಂಥ ಗಂಭೀರ ಪರಿಸ್ಥಿತಿಯಲ್ಲಿ ಸರ್ಕಾರದವರು ತಮ್ಮ ಒಂದು ವಿಜೃಂಭಣೆಗಾಗಿ ಕಾರುಗಳನ್ನು ಕೊಂಡುಕೊಳ್ಳುವುದಕ್ಕೆ ಹೊರಟಿರುವುದನ್ನು ನೋಡಿದರೆ ಅವರು ಹೇಳತಕ್ಕ ನೀತಿಗೂ ಮಾಡತಕ್ಕ ಕೆಲಸಕ್ಕೂ ಹೊಂದಾಣಿಕೆಯಾಗುವುದಿಲ್ಲ. ಇದರಿಂದ ದೇಶದಲ್ಲಿರತಕ್ಕ ಜನರ ಉತ್ಸಾಹ ಭಂಗವಾಗುತ್ತದೆ. ದೇಶದ ರಕ್ಷಣೆಯ ಕಡೆಗೆ ನಾವು ಒಂದೊಂದು ಕಾಸನ್ನೂ ಮುಡುಪಾಗಿಡತಕ್ಕ ಕಾಲದಲ್ಲಿ, ಸರ್ಕಾರದವರು ಈ ಸಭೆಯನ್ನು ಆರು ತಿಂಗಳ ಅಂತ್ಯದಲ್ಲಿ ಕರೆದರೂ ಚಿಂತೆಯಿಲ್ಲ ಎಂದು ಹೇಳುತ್ತಿರುವಾಗ, ಹೀಗೆ ದುಂದು ವೆಚ್ಚ ಮಾಡತಕ್ಕದ್ದು ಖಂಡಿತಾ ಶ್ಲಾಘನೀಯವಾದ್ದಲ್ಲ ಎಂದು ಹೇಳಬೇಕಾಗಿದೆ......

Sri B R. SUNTHANKAR (Belgaum City).—On a Point of Order, Sir. Our Leader of the Opposition is speaking on the Supplementary Demands. May I know who is the Minister who is paying attention to his speech ? Nobody seems to pay any attention. Every Minister is engaged in something or the other.

Sri C. J. MUCKANNAPPA.—Sir, that is the complaint that is often made on the Floor of this House. None of the Ministers cares to know what is going on.

Sri D. DEVARAJ URS.—Sir, I am here and noting down the points.

2-30 P.M.

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಇದು ನಿಜವಾಗಿಯೂ ಕೂಡ ಎಂಥ ವಿಷಾದನೀಯವಾದ ಘಟನೆ ಎಂಬುದನ್ನು ಅರಿತುಕೊಳ್ಳಬೇಕು. ಇಂತಹ ಹಣಕಾಸಿನ ಸಪ್ಲಿಮೆಂಟರಿ ಬಡ್ಜೆಟ್‌ಗಳನ್ನು ಇಟ್ಟು ಸಂಬಂಧಪಟ್ಟ ಸಚಿವರು ಚರ್ಚೆಯಲ್ಲಿ ಭಾಗವಹಿಸಿ ಏನು ಹೇಳುತ್ತಾರೆ ಎಂಬುದನ್ನು ಕೇಳುವಷ್ಟು ಕೂಡ ಶಾಂತತೆ ಅವರಿಗೆ ಇಲ್ಲದೆ ಹೋದರೆ ಇದರಿಂದ ಎಂತಹ ಪರಿಣಾಮವಾಗುತ್ತದೆ ಎಂಬುದನ್ನು ನೋಡಬೇಕು.

Sri D. DEVARAJ URS.—I would like to clarify the misconception and misunderstanding about the absence of the concerned Minister. He was necessarily to go on some other work and he is coming here again. I am here to look into the matter. He cannot sit here throughout the day.

ಶ್ರೀ ಎಸ್. ಶಿವಪ್ಪ.—ಡಿಮ್ಯಾಂಡ್ ನಂ. 44ರಲ್ಲಿ ಧಾರವಾಡದಲ್ಲಿನ ಗಡಿಯಾರ ತಯಾರು ಮಾಡತಕ್ಕ ಕಾರ್ಖಾನೆಗೆ 2 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದನ್ನು ಏಕೆ ಕೊಡಬೇಕಾಯಿತು ? ಇಂತಹ ಕಂಪನಿಗಳು ಎಷ್ಟೋ ಇವೆ, ಅವುಗಳಿಗೆಲ್ಲಾ ಕೊಡುತ್ತೀರಾ ? ಸರ್ಕಾರದ ನೀತಿ ಏನಿದೆ ಎಂಬುದನ್ನು ಹಣಕಾಸಿನ ಸಚಿವರು ತಿಳಿಸಬೇಕೆಂದು ಹೇಳುತ್ತೇನೆ. ಇದರ ಹಿನ್ನೆಲೆ ಏನು ?

ಐಟಂ ನಂಬರು (3)ರಲ್ಲಿ ಕೋ-ಆಪರೇಟೀವ್ ಸೊಸೈಟಿಗೆ ಹಣವನ್ನು ಕೊಟ್ಟಿದ್ದೀರಿ. ಮೊದಲು ಕೊಟ್ಟ ಹಣ ಸಾಲದೇ ಹೋಯಿತು, ಆಹಾರ ಧಾನ್ಯವನ್ನು ಕೊಳ್ಳುವುದಕ್ಕೆ ಮೂಲ ಧನವನ್ನು ಕೊಟ್ಟೆವು ಎಂದು ಹೇಳಿದ್ದೀರಿ. ಆಹಾರವನ್ನು ಕೊಳ್ಳುವುದು, ಸಾಗಾಣಿಕೆ ಮಾಡುವುದು, ಹಂಚಿಕೆಯ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ನಾನಾದರೂ ಸರ್ಕಾರದವರನ್ನು ಕೇಳಬಯಸುತ್ತೇನೆ. ಇವತ್ತು ಬೆಂಗಳೂರು ನಗರದಲ್ಲಿ ಎಷ್ಟೋ ಕೋ-ಆಪರೇಟೀವ್ ಸೊಸೈಟಿಗಳ ಮುಖಾಂತರ ಆಹಾರವನ್ನು ಶೇಖರಿಸುತ್ತಾ ಇದ್ದೀರಿ. ಎಷ್ಟೋ ಜನ ದೊಡ್ಡ ದೊಡ್ಡ ವ್ಯಾಪಾರಗಾರರ ಮುಖಾಂತರ ಆಹಾರ ಶೇಖರಣೆಯ ಕಾರ್ಯವನ್ನು ಬೆಂಗಳೂರು ನಗರದಲ್ಲಿ ಮಾಡುತ್ತಾ ಇದ್ದೀರಿ. ಇಲ್ಲಿ ಅನೇಕ ವರ್ಷಗಳಿಂದ ಆಹಾರದ ವ್ಯಾಪಾರದಲ್ಲಿ ತೊಡಗಿರತಕ್ಕ ದೊಡ್ಡ ದೊಡ್ಡ ವರ್ತಕರನ್ನು ಬಿಟ್ಟು ಹೊಸದಾಗಿ ಮೊನ್ನೆ ಮೊನ್ನೆ ಆಹಾರದ ವಿಚಾರವೇ ಗೊತ್ತಿಲ್ಲದ ವರ್ತಕರಿಗೆ ದೊಡ್ಡ ದೊಡ್ಡ ವ್ಯವಹಾರಗಳನ್ನು ಮಾಡತಕ್ಕ ಒಂದು ಜವಾಬ್ದಾರಿಯನ್ನು ಸರ್ಕಾರದವರೇ ನೇರವಾಗಿ ವಹಿಸಿದ್ದೀರಲ್ಲಾ

ಇದರಲ್ಲಿ ಏನು ಒಂದು ನೀತಿ ಇದೆ? ಆಹಾರ ಕೊಳ್ಳುವಿಕೆ, ಹಂಚಿಕೆಯ ವ್ಯವಸ್ಥೆಯನ್ನು ಕೆಲವು 10-12 ದೊಡ್ಡ ವರ್ತಕರಿಗೆ ಆರಿಸಿ ಕೊಟ್ಟಿದ್ದೀರಿ, ಅವರಿಗಿಂತಲೂ ಹತ್ತರಷ್ಟು ವಹಿವಾಟು ನಡೆಸತಕ್ಕ ಭಾರಿ ವರ್ತಕರನ್ನು ದೂರೀಕರಿಸುತ್ತಾ ಇದ್ದೀರಿ. ಮೊನ್ನೆ ಮುಖ್ಯ ಮಂತ್ರಿಗಳು ಒಂದು ಮಾತು ಹೇಳಿದರು ವರ್ತಕ ವರ್ಗದವರು ಕೆಲವರನ್ನು ನಾಶ ಮಾಡುತ್ತೇವೆ ಎಂದು ಘರ್ಜನೆ ಮಾಡಿದರು. ಬಹುಶಃ ಎರಡು ತರಹ ವರ್ತಕರ ವರ್ಗದವರು ಇದ್ದಾರೆ. ಯಾವುದೋ ಒಂದು ವರ್ತಕ ವರ್ಗ ಅವರಿಗೆ ಬೇಡವಾದವರು ಯಾರಿದ್ದಾರೆ ಅವರನ್ನು ನಾಶ ಮಾಡತಕ್ಕ ಒಂದು ಕಾರ್ಯ ಇರಬಹುದು. ಆದರೆ ಅವರು ಇದನ್ನು ಮರೆತಿದ್ದಾರೆ, ಅವರ ಸುತ್ತಮುತ್ತ ಒಂದು ಗುಂಪು ಸದಾ ಕಾಲ ಇದೆ. ಅದನ್ನು ಉತ್ತೇಜನ ಮಾಡುತ್ತಾ ಇದ್ದಾರೆ. ಒಂದು ವರ್ಗವನ್ನು ಉತ್ತೇಜನ ಮಾಡಿ, ಮತ್ತೊಂದು ವರ್ಗವನ್ನು ನಾಶ ಮಾಡತಕ್ಕ ನೀತಿ ಖಂಡಿತವಾಗಿಯೂ ಅಪಾಯಕರವಾದ ನೀತಿ. ಇದಕ್ಕೆ ಬೆಂಗಳೂರಿನ ಒಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ಈ ನೀತಿ ಏನೆಂಬುದನ್ನು ಪರಿಶೀಲನೆ ಮಾಡಿ ಮಾನ್ಯ ಸಚಿವರು ಉತ್ತರ ಹೇಳಿದರೆ ನಿಜವಾಗಿಯೂ ಸಮಾಧಾನಪಡುತ್ತೇನೆ. ನಮ್ಮ ಹೊಸ ಆಹಾರ ಸಚಿವರು ಯಾರಿದ್ದಾರೆ ಅವರಿಂದ ಉತ್ತರವನ್ನು ನಿರೀಕ್ಷಣೆ ಮಾಡುತ್ತೇನೆ. ಈ ರೀತಿಯಾಗಿ ನಮ್ಮ ದೇಶದಲ್ಲಿ ಯಾವ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ, ಈ ತುರ್ತು ಪರಿಸ್ಥಿತಿಯಲ್ಲಿ ಸರ್ಕಾರದಿಂದ ಏನೊಂದು ನೀತಿಯನ್ನು ಅಪೇಕ್ಷಿಸುತ್ತಾ ಇದ್ದೇವೆಯೋ ಆ ನೀತಿ ಇವತ್ತು ಸರ್ಕಾರದಿಂದ ಬರುತ್ತಾ ಇಲ್ಲ. ಯಾವ ಒಂದು ಬಾಬನ್ನು ತೆಗೆದುಕೊಂಡರೂ ಕೂಡ ತುರ್ತು ಪರಿಸ್ಥಿತಿಯಲ್ಲಿ ಇಂತಹ ಕೆಲಸಗಳು ನಡೆಯುತ್ತಾ ಇರುವುದು ಸರಿಯಲ್ಲ.

ಶ್ರೀ ಡಿ. ದೇವರಾಜ ಅರಸ್.—ವರ್ತಕರು ಯಾರೇ ಆಗಲಿ ಅವರಿಗೆ ಕೊಡುವುದು ಬೇಡ ಅನ್ನುತ್ತೀರಾ? ಅಥವಾ ಅವರಿಗೂ ಕೊಡಬೇಕು ಎನ್ನುತ್ತೀರಾ?

ಶ್ರೀ ಎಸ್. ಶಿವಪ್ಪ.—ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಬಳಿಯುತಕ್ಕ ನೀತಿ ತಪ್ಪು ಎಂದು ಹೇಳುತ್ತೇನೆ. ವರ್ತಕವರ್ಗದವರಿಗೆ ಯಾರಿಗೂ ಕೊಡುವುದಿಲ್ಲ ಎಂದರೆ ಅದು ಬೇರೆ ಮಾತು. ಸರ್ಕಾರದವರೇ ನೇರವಾಗಿ ಹಂಚತಕ್ಕ ಜವಾಬ್ದಾರಿಯನ್ನು ತೆಗೆದುಕೊಳ್ಳಿ ಎಂದು ಹೇಳಿದ್ದೇನೆ. ಅದಕ್ಕೆ ತಾವು ಸಿದ್ಧವಾಗಿಲ್ಲ. ವರ್ತಕರಿಗೆ ವಹಿಸಿಕೊಟ್ಟಿದ್ದೀರಿ, ಹಾಗೆ ಕೊಡುವಾಗ ಅನುಚಿತವಾಗಿ, ಶತಮಾನಗಳಿಂದ ವ್ಯಾಪಾರ ಮಾಡುತ್ತಾ ಇದ್ದ ವರ್ತಕರ ವರ್ಗವನ್ನು ದೂರ ಮಾಡಿ ಹೊಸದಾಗಿ ಕೆಲವರನ್ನು ತಂದು ಅವರಿಗೆ ಏಕೆ ಅಪಚಾರ ಮಾಡುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಬಿ. ಡಿ. ಜತ್ತಿ (ಆಹಾರ ಶಾಖೆಯ ಮಂತ್ರಿಗಳು).—ಮಾನ್ಯ ಶಿವಪ್ಪನವರು ಹೇಳುವ ಮಾತಿನೊಳಗೆ ಕೆಲವು ಅಂಶ ಸತ್ಯ ಇದೆ. ಕಾರಣ ಏನೆಂದರೆ ಲೈಸೆನ್ಸ್ ಇಷ್ಯೂ ಮಾಡಬೇಕಾದರೆ ಜನವರಿ ಮೊದಲನೆ ತಾರೀಖಿನಿಂದ ಡಿಸೆಂಬರ್ ಕೊನೆಯವರೆಗೂ ಮಾಡುತ್ತಾರೆ. ಅದು ಫುಡ್ ಇಯರ್. ಅದರ ಮಧ್ಯೆ ಯಾವುದಾದರೂ ರೀತಿಯಲ್ಲೇ ಆಗಲಿ ಇಷ್ಯೂ ಮಾಡಿದ ಲೈಸೆನ್ಸನ್ನು ಕ್ಯಾನ್ಸಲ್ ಮಾಡುವುದಕ್ಕೆ ಬರುವುದಿಲ್ಲ. ಒಂದು ವೇಳೆ ಮಾಡಿದರೆ ಕಾನೂನು ಪ್ರಕಾರ ಕೋರ್ಟಿಗೆ ಹೋಗಿ ರಿಟ್ ಹಾಕುವಂತಹ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಡಿಸೆಂಬರ್ ಕೊನೆಯವರೆಗೂ ಮೊದಲು ಯಾರು ಮಾಡುತ್ತಾ ಇದ್ದರೋ ಅವರೇ ಮಾಡಬೇಕಾಗಿ ಬರುತ್ತದೆ. ಅವರು ಒಳ್ಳೆಯವರು ಇರಲಿ, ಕೆಟ್ಟವರು ಇರಲಿ ಯಾರೇ ಆಗಲೀ ಅವರೇ ಇರಬೇಕು. ಮುಂದೆ ಕೊಡುವಾಗ ಯೋಗ್ಯರಾಗಿ ಇದ್ದವರನ್ನು ಉಳಿಸುತ್ತೇವೆ.

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಫಿಷರಿ ಇಲಾಖೆ, ವ್ಯವಸಾಯದ ಇಲಾಖೆ ಈ ರೀತಿ ಇನ್ನೂ ಅನೇಕ ಇಲಾಖೆಗಳಲ್ಲಿ ಹೆಚ್ಚು ಹಣ ಬೇಕೆಂದು ಹೇಳತಕ್ಕ ಬೇಡಿಕೆಯನ್ನು ಸಭೆಯ ಮುಂದೆ ಇಟ್ಟಿದ್ದೀರಿ, ಈವತ್ತು ದೇಶ ತುರ್ತು ಪರಿಸ್ಥಿತಿಯಲ್ಲಿರತಕ್ಕ ಕಾಲದಲ್ಲಿ ತಮ್ಮ ನೀತಿ ಎಷ್ಟರಮಟ್ಟಿಗೆ ತುರ್ತು ಪರಿಸ್ಥಿತಿಗೆ ಹೊಂದಿಕೊಂಡಿದೆ, ಅಳವಡಿಸಿಕೊಂಡಿದೆ ಎಂಬುದನ್ನು ತಮ್ಮಿಂದ ತಿಳಿಯಲಿಚ್ಛಿಸುತ್ತೇನೆ. ನಿಮ್ಮ ಆರ್ಥಿಕ ನೀತಿ ಖಂಡಿತವಾಗಿಯೂ ಕೂಡ ತುರ್ತು ಪರಿಸ್ಥಿತಿಯ ನೀತಿಗೆ ಹೊಂದಿಕೊಂಡಿಲ್ಲ ಎಂಬ ಭಾವನೆ ಎದ್ದು ಎದ್ದು ಕಾಣುತ್ತಾ ಇದೆ. ಪ್ರಚಾರಕ್ಕೆ, ಭಾಷಣಕ್ಕಾಗಿ ಇವತ್ತಿನ ದಿವಸ ಭಾಷಣಗಳನ್ನು ವೇದಿಕೆಗಳ ಮೇಲೆ ಮಾಡುತ್ತಾ ಇದ್ದೀರಿ. ಈ ಭಾಷಣಕ್ಕೂ ಕೃಷಿಗೂ ಒಂದು ಹೊಂದಾಣಿಕೆ ಇರಬೇಕು, ಅದು ಮಾಯವಾಗಿದೆ. ಇವತ್ತಿನ ದಿವಸ ತುರ್ತು ಪರಿಸ್ಥಿತಿ ಎಂದು ಹೇಳಿ ಕೇವಲ ಕೆಲವು ಸಣ್ಣ ಸ್ಕೀಮುಗಳನ್ನು ನಿಲ್ಲಿಸುವುದು ತುರ್ತು ಪರಿಸ್ಥಿತಿಯ ಕಾರ್ಯಕ್ರಮವಾಗುವುದಾದರೆ ಅದರಿಂದ ದೇಶಕ್ಕೆ ಏನೇನೂ ಪ್ರಯೋಜನವಾಗುವುದಿಲ್ಲ. ಖಂಡಿತವಾಗಿಯೂ ತಾವು ಏನು ಹೇಳುತ್ತೀರೋ ಆ ಮಾತುಗಳನ್ನು ಕೃತಿಗೆ ಇಳಿಸಿರಿ ಎಂದು ಹೇಳಿ ಈ ಸಂದರ್ಭದಲ್ಲಿ ಒಂದು ಸೂಚನೆಯನ್ನು ಸರ್ಕಾರದವರಿಗೆ ಕೊಡುತ್ತೇನೆ.

† ಶ್ರೀ ಎ. ಕೃಷ್ಣ ಶೆಟ್ಟಿ (ಮಂಗಳೂರು).—ಸಪ್ಲಿಮೆಂಟರಿ ಬಜೆಟ್‌ನಲ್ಲಿ ನಾನು ಡಿಮಾಂಡ್ ನಂಬರ್ 26 ರ ವಿಷಯ ಇಲ್ಲಿ ಸ್ವಲ್ಪ ಮಾತನಾಡಲು ಬಯಸುತ್ತೇನೆ. ಇದು ಮಜೂರರ ಖಾತೆಗೆ ಸಂಬಂಧಪಟ್ಟದ್ದು. ಈ ಸಭೆಯಲ್ಲಿ ನಾವು ಆಹಾರದ ವಿಷಯ ತುಂಬಾ ಚರ್ಚೆ ಮಾಡಿದೆವು.

(ಶ್ರೀ ಎ. ಕೃಷ್ಣ ಶೆಟ್ಟಿ)

ಆಹಾರದ ವಿಷಯ ಚರ್ಚೆ ಮಾಡಿ ಆಹಾರವನ್ನು ಹೆಚ್ಚಿಗೆ ಬೆಳೆಸಬೇಕು, ಆಹಾರವನ್ನು ತಕ್ಷಣ ಸಾಕಾದಷ್ಟು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಒಂದು ಕಡೆ ರಣ ರಂಗ ಇದ್ದರೆ ಇನ್ನೊಂದು ಕಡೆ ಗದ್ದೆಗಳೂ ಕೂಡಾ ರಣರಂಗಗಳಾಗಿ ಮಾರ್ಪಾಡಾಗಬೇಕು ಎಂದು ನಾನು ಇಲ್ಲಿ ಹೇಳಬಯಸುತ್ತೇನೆ. ಕೈಗಾರಿಕೆಗಳನ್ನು ಕೂಡಾ ಒಂದು ವಾರ್ ಫೂಟಿಂಗ್ ನಲ್ಲಿ ತರುವುದಕ್ಕೆ ಪ್ರಯತ್ನ ಮಾಡುವುದು ಅಗತ್ಯ. ಇದಕ್ಕೆ ಏನು ಮಾಡಬೇಕು ಎಂದರೆ ಮಜೂರರಲ್ಲಿ ಮತ್ತು ಮಾಲೀಕರಲ್ಲಿ ಒಂದು ಮೈತ್ರಿ ಭಾವನೆ ಮೂಡುವುದಕ್ಕೆ ಸರ್ಕಾರದವರು ಈ ಸಂದರ್ಭದಲ್ಲಿ ಪ್ರಯತ್ನ ಮಾಡಬೇಕು. ಈ ಪ್ರಯತ್ನವನ್ನು ಸರ್ಕಾರದವರು ಮಾಡಿದ್ದಾರೆಯೇ, ಮಾಡಲಿಲ್ಲ ಎಂದು ನನ್ನ ಅಭಿಪ್ರಾಯ. ನಮ್ಮ ಮೈಸೂರು ರಾಜ್ಯದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ, ಬೆಂಗಳೂರಿನಿಂದ ಹಿಡಿದು ಮಂಗಳೂರಿನ ವರೆಗೆ, ಮಿಲ್ಲಿನಲ್ಲಾಗಲೀ, ಹಂಚಿನ ಕಾರ್ಖಾನೆಗಳಲ್ಲಾಗಲೀ, ಗೇರುಬೀಜ ಕಾರ್ಖಾನೆಗಳಲ್ಲಾಗಲೀ ನಡೆದ ಕೆಲವು ಹೋರಾಟಗಳನ್ನು ತೆಗೆದು ನೋಡಿದರೆ, ನಿಜವಾಗಿ ಇಂದಿನ ಪರಿಸ್ಥಿತಿಗೆ ಹೊಂದಿಕೊಂಡು ಸರ್ಕಾರ ಈ ಘರ್ಷಣೆಗಳು ನಡೆಯದಂತೆ ಪ್ರಯತ್ನ ಮಾಡುವುದು ಅತ್ಯಗತ್ಯ. ಮಂಗಳೂರಿನಲ್ಲಿ 2 ಕಡೆ ಮುಷ್ಕರ ನಡೆಯಿತು. ಇದು ನಡೆದು ನಾಲ್ಕು ತಿಂಗಳ ಅವಧಿಯಾದರೂ ಇವತ್ತು ಅಲ್ಲಿ ಏನೂ ಒಂದು ಶಾಂತಿ ನೆಲೆಸಲಿಲ್ಲ. ಅಲ್ಲಿ ಈ ಹೊತ್ತಿಗೆ ಒಂದು ಸರಿಯಾದ ಶಾಂತ ರೀತಿಯಾಗಿ ವಾತಾವರಣ ನೆಲೆಸುವಂತೆ ನಾವು ಮಾಡಬೇಕು. ಅಲ್ಲಿ ಮಾತ್ರವಲ್ಲ, ಬೇರೆ ಸಕ್ಕರೆ ಕಾರ್ಖಾನೆ ಮತ್ತು ಹೊಸಪೇಟೆಯ ಬೇರೆ ಕೆಲವು ಕಡೆಗಳಲ್ಲಿಯ ಮಿಲ್ಲುಗಳನ್ನು ತೆಗೆದು ನೋಡಿರಿ. ಎಲ್ಲಾ ಕಡೆಗಳಲ್ಲೂ ಮಜೂರರಿಗೆ ತುಂಬಾ ಅತೃಪ್ತಿಯಾಗಿದೆ. ಮಾಲೀಕರು ಈಗ ನಡೆದ ಆಕ್ರಮಣದ ಅನುಕೂಲವನ್ನು ತೆಗೆದುಕೊಂಡು ಈ ಮಜೂರರನ್ನು ಸದೆಬಡಿಯಲು ಒಂದು ಉಪಾಯವನ್ನು ನೋಡುತ್ತಿದ್ದಾರೆ. ಇದರಿಂದ ಅವರಿಗೆ ಅನುಕೂಲವಾದ ಸಂದರ್ಭ ಒದಗಿದಂತಾಗಿದೆ. ದೇಶದ ರಕ್ಷಣೆಯ ಹೆಸರಿನಲ್ಲಿ ಆಕ್ರಮಣದ ಹೆಸರಿನಲ್ಲಿ ಲಾಭ ಸಂಪಾದನೆ ಮಾಡುವುದಕ್ಕೆ, ಮತ್ತು ಮಜೂರರನ್ನು ಸದೆಬಡಿಯುವುದಕ್ಕೆ ಅವರು ಒಂದು ದೊಡ್ಡ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ಸರ್ಕಾರ ನೋಡಿ ಸುಮ್ಮನೆ ಇರಬಾರದು. ಕಾರ್ಖಾನೆಯಲ್ಲಿ ಶಾಂತಿ ಬರುವ ಹಾಗೆ, ನೆಮ್ಮದಿ ಬರುವ ಹಾಗೆ ಪ್ರಯತ್ನ ಮಾಡುವುದು ಸರ್ಕಾರದ ಕರ್ತವ್ಯ. ಈಗ ನಡೆಯುತ್ತಿರುವ ಘರ್ಷಣೆಗಳನ್ನು, ಸಮಸ್ಯೆಗಳನ್ನು ನಿವಾರಿಸಲು ಪ್ರಯತ್ನ ಮಾಡಬೇಕು ಅದು ಬೇಗನೆ ನಿವಾರಣೆಯಾಗುವ ಹಾಗೆ ಪ್ರಯತ್ನ ಮಾಡಿ ಕೈಗಾರಿಕೆಯಲ್ಲಿ ಒಂದು ಶಾಂತಿ ನೆಲೆಸಿ ಹೆಚ್ಚಿಗೆ ಉತ್ಪತ್ತಿಯಾಗುವಂತೆ ಮತ್ತು ಹೆಚ್ಚಿಗೆ ಆಹಾರ ಉತ್ಪತ್ತಿಯಾಗುವಂತೆ ಮಾಡಬೇಕೆಂದು ಮಾನ್ಯ ಮಂತ್ರಿವರ್ಯರನ್ನು, ಈ ಸಭೆಯಲ್ಲಿ ನಾನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಮೋಟಾರ್ ಟ್ರಾನ್ಸ್‌ಪೋರ್ಟು ವರ್ಕರ್ಸ್ ಆಕ್ಟ್ 1960 ರಲ್ಲಿ ಮಂಜೂರು ಆಗಿದೆ, 1962 ರಲ್ಲಿ ಜಾರಿಯಾಗಿದೆ. ಈ ಆಕ್ಟನ್ನು ಇಷ್ಟರವರೆಗೆ ನಡವಳಿಕೆಗೆ ತರಲಿಕ್ಕೆ ತಡಮಾಡಿದ್ದು ಯಾಕೆ? ಮೋಟಾರ್ ಕೈಗಾರಿಕೆಗಳ ನೌಕರರಲ್ಲಿ ಎಷ್ಟು ಅತೃಪ್ತಿ ಉಂಟು? ರೋಡ್ ಟ್ರಾನ್ಸ್‌ಪೋರ್ಟು ಲಾಭದಾಯಕವಾದ ಸಂಸ್ಥೆಯಾಗಿ ಕೆಲಸ ಮಾಡುತ್ತಿಲ್ಲ. ಹೀಗಿರುವಾಗ ಒಂದು ಕಾನೂನನ್ನು ಜಾರಿ ಮಾಡಲು 1962 ರಿಂದ 1965 ರ ವರೆಗೆ ಇಷ್ಟು ತಡಮಾಡಲಿಕ್ಕೆ ಮುಖ್ಯ ಕಾರಣವೇನು ? ಇದನ್ನು ಸರಿಯಾಗಿ ಇಲ್ಲಿ ವಿವರಿಸುವುದು ಅಗತ್ಯವಿದೆ. ಇಲ್ಲಿ ಮಾತ್ರವಲ್ಲ ಇದು ಎಲ್ಲಾ ಕಡೆಗಳಲ್ಲೂ ಹೀಗೆ ನಡೆಯುತ್ತದೆ. ಹೀಗೆ ನಡೆಯುವಾಗ ಈ ಅತೃಪ್ತಿಯು ಮಜೂರರ ಮಧ್ಯೆ ಈ ರೀತಿ ಮುಂದುವರಿದರೆ, ಇದರ ಪರಿಣಾಮ ಬರೇ ಮೋಟಾರ್ ಕೈಗಾರಿಕೆ ಮಾತ್ರವಲ್ಲ, ಎಲ್ಲಾ ಕೈಗಾರಿಕೆಗಳಿಗೂ ಹಬ್ಬಿ, ಒಂದು ಹಾಳು ಸ್ಥಿತಿಯನ್ನು ತರಲಿಕ್ಕೆ ಸಾಧ್ಯ ಉಂಟು. ಇದನ್ನು ನಾವು ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ನಾನು ಇನ್ನೊಂದು ವಿಷಯವನ್ನು ಇಲ್ಲಿ ಹೇಳಬಯಸುತ್ತೇನೆ. ಮಜೂರರ ಕೆಲವು ಸೊಂಪುಗಳು ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಮುಂದೆ ಹೋಗಿವೆ. ಗೇರುಬೀಜ ಕಾರ್ಖಾನೆಯ ಮಜೂರರು 50 ಪೈಸೆ ಮಜೂರಿ ಹೆಚ್ಚಿಗೆ ಕೊಡಬೇಕೆಂದು ಕೇಳುತ್ತಾರೆ. ಆದರೆ ಅವರು ಕೇಳಿದಂತೆ ಮಜೂರಿ ಇಷ್ಟರವರೆಗೆ ಸಿಗಲಿಲ್ಲ. ಸಾಮಾನುಗಳ ಬೆಲೆ ಏರುತ್ತಾ ಇದೆ. ಅದೇ ರೀತಿ ಆಹಾರ ಸಾಮಗ್ರಿಗಳ ಬೆಲೆಯೂ ಬಹಳ ಮೇಲೇರಿದೆ. ಈಗ ಮಜೂರಿಯು ನಿಜವಾಗಿಯೂ ಬಹಳ ಕಮ್ಮಿ ಉಂಟು. ಕಾರ್ಮಿಕರ ಒಂದು ಮಜೂರಿಯಲ್ಲಿ ಇಂದಿನ ದಿನ ಜೀವನ ಮಾಡಲು ಬಹಳ ಕಷ್ಟವಾಗುತ್ತಿದೆ. ಇದು ನಿಜವಾಗಿಯೂ ಒಂದು ಮುಖ್ಯ ಪ್ರಶ್ನೆಯಾಗಿದೆ. ಹೀಗಾಗಿ ಸಾಹುಕಾರರ ಮತ್ತು ಮಜೂರರ ಮಧ್ಯೆ ಸೊಂಪು ನಡೆದು ಹೆಚ್ಚಿಗೆ ಮಜೂರಿ ಕೊಡದೆ ಇರುವುದು, ಮಾಲೀಕರು ಕಡಿಮೆ ಕೆಲಸ ಕೊಡುತ್ತಾ ಹಾಗೂ ಇನ್ನಿತರ ರೀತಿಯಲ್ಲಿ ಮಜೂರರನ್ನು ಸದೆಬಡಿಯಲು ನೋಡುವ ಈ ಒಂದು ಪರಿಸ್ಥಿತಿಯನ್ನು ಹೋಗಲಾಡಿಸಿ ಮಜೂರರ ಮಧ್ಯೆ ಶಾಂತಿ ತಂದು ಹೆಚ್ಚಿಗೆ ಉತ್ಪತ್ತಿಯಾಗಲು ಒಂದು

ವಾರ್ ಫೂಟಿಂಗ್ ಮೇಲೆ ಕೈಗಾರಿಕೆಗಳು ನಡೆಯುವಂತೆ ಸರ್ಕಾರ ಪ್ರಯತ್ನ ಮಾಡಬೇಕು. ಇದು ಇಷ್ಟರವರೆಗೆ ಮಾಡಲಿಲ್ಲ. ಹಾಗೆ ಪ್ರಯತ್ನ ಮಾಡುವ ಅಗತ್ಯ ಉಂಟು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿದ್ದಯ್ಯ ಕಾಶೀಮಠ್ (ಶಿರಹಟ್ಟಿ).—ಅಧ್ಯಕ್ಷರೇ, ರಾಜ್ಯದ ಆರ್ಥಿಕ ಮಂತ್ರಿಗಳು ತುರ್ತು ಪರಿಸ್ಥಿತಿಯ ನೆಪದಿಂದ 1 ಕೋಟಿ 15 ಲಕ್ಷ, 72 ಸಾವಿರ ರೂಪಾಯಿಯ ಹೆಚ್ಚುವರಿ ಬೇಡಿಕೆಗಳನ್ನು ಈ ಸಭೆಯ ಮುಂದಿಟ್ಟಿದ್ದಾರೆ. ನಾನು ಹೆಚ್ಚುವರಿ ಬೇಡಿಕೆಯನ್ನು ನೋಡಿದಾಗ ಇದರಲ್ಲಿ ಕಾಣಿಸತಕ್ಕ ಅಂಶಗಳಿಗೂ ತುರ್ತು ಪರಿಸ್ಥಿತಿಗೂ ಯಾವುದೇ ಸಂಬಂಧವೂ ಇಲ್ಲವೆಂದು ಹೇಳಬಯಸುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 5 ರಲ್ಲಿ ತುರ್ತು ಪರಿಸ್ಥಿತಿಗೆ ಅನುಸಾರವಾಗಿ ಸೇಲ್ಸ್ ಟ್ಯಾಕ್ಸ್ ಮತ್ತು ಕಮರ್ಷಿಯಲ್ ಟ್ಯಾಕ್ಸ್ ಬಗ್ಗೆ ಹೆಚ್ಚಿನದಾದ ಕೆಲಸ ಬಿದ್ದಿರುವುದರಿಂದ ಸುಮಾರು 200 ಪೋಸ್ಟುಗಳನ್ನು ಕ್ರಿಯೇಟ್ ಮಾಡಿ ಅವರಿಗೆ ಇವತ್ತು ಪೇ ಮತ್ತು ಅಲೋವೆನ್ಸ್ ಕೊಡುವುದಕ್ಕಾಗಿ ಒಂದು ಐಟಮು ಇಟ್ಟಿದ್ದಾರೆ. ನಾನಾದರೂ ಹೇಳುತ್ತೇನೆ, ಈ ರೀತಿಯಾಗಿ ಈಗಾಗಲೇ ಸುಮಾರು 200 ಆಫೀಸರ್ಸ್, ಕ್ಲಾರ್ಕ್ಸ್ ಮುಂತಾದವರನ್ನು ನೇಮಕ ಮಾಡಿದ್ದರೂ ಕೂಡಾ ಎಷ್ಟುಮಟ್ಟಿಗೆ ಸೇಲ್ಸ್ ಟ್ಯಾಕ್ಸ್, ಕಮರ್ಷಿಯಲ್ ಟ್ಯಾಕ್ಸ್ ರಿಕವರಿ ಮಾಡಿದ್ದಾರೆ ಎನ್ನುವುದನ್ನು ಅವರು ತಿಳಿಸಲಿಲ್ಲ, ಅದನ್ನು ಉತ್ತರದಲ್ಲಿ ತಿಳಿಸಬೇಕೆಂದು ಹೇಳಬಯಸುತ್ತೇನೆ.

ಡಿಮ್ಯಾಂಡ್ ನಂಬರ್ 10 ರಲ್ಲಿ ಕಾರುಗಳ ಬಗ್ಗೆ ಹೇಳಿದ್ದಾರೆ. 8 ಕಾರುಗಳನ್ನು ಕೊಂಡು ಕೊಂಡಿದ್ದಾರೆ. ಹಳೆಯ ಕಾರುಗಳನ್ನು ಮಾರಿ ಬಂದಂತಹ ಹಣವನ್ನು ಗೌರ್ನಮೆಂಟ್ ಅಕೌಂಟಿಗೆ ಸೇರಿಸಬೇಕೆಂದು ಎಕ್ಸ್‌ಪ್ಲೇನೇಟರಿ ನೋಟಿನಲ್ಲಿ ಹೇಳಿದ್ದಾರೆಂದು ನಾನಾದರೂ ಕೇಳುತ್ತೇನೆ. ಈಗಾಗಲೇ ಹಳೆಯ ಕಾರುಗಳನ್ನು ಹರಾಜು ಹಾಕಿದ್ದಾರೆಯೇ ಅಥವಾ ಯಾರಿಗಾದರೂ ಮಾರಿದ್ದಾರೆಯೇ ಎನ್ನತಕ್ಕ ವಿಷಯವನ್ನು ಇಲ್ಲಿ ತಿಳಿಸಿಲ್ಲ. ಅದನ್ನು ತಿಳಿಸಬೇಕೆಂದು ಹೇಳುತ್ತೇನೆ.

ಇನ್ನು ಮುಖ್ಯವಾದ ಡಿಮ್ಯಾಂಡ್ ನಂಬರ್ 13 ರಲ್ಲಿ ಆಹಾರಧಾನ್ಯ ಸಾಗಾಣಿಕೆಯ ಬಗ್ಗೆ, ಎಂದರೆ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹೋಗುವುದಕ್ಕೆ ಚೆಕ್ ಪೋಸ್ಟುಗಳನ್ನು ಮತ್ತು ಮೋಬೈಲ್ ಸ್ಕ್ವಾಡ್ಸುಗಳು ಕೆಲವು ಜಿಲ್ಲೆಗಳಲ್ಲಿ ಮಾಡಿದ್ದಾರೆ. ಎಕ್ಸ್‌ಪ್ಲೇನೇಟರಿ ನೋಟಿನಲ್ಲಿ—

"Creation of 12 Mobile Squads in certain Districts, with a staff of 2 Head Constables and 2 Police Constables for each Squad for effective enforcement of Laws.

Purchase of 12 Willy's Jeeps at a total approximate cost of Rs. 1.92 lakhs and creation of 12 posts of Police Constable Drivers" ಎಂದು ಹೇಳಿದ್ದಾರೆ.

ಅದಾದ ನಂತರ ಆ ರೀತಿಯಾಗಿ ಅವುಗಳಿಗೆ ಷೆಡ್ಸ್ ಕಟ್ಟಿಸುವುದಕ್ಕೆ ಸಾಕಷ್ಟು ರೊಕ್ಕ ಖರ್ಚು ಮಾಡಿದ್ದಾರೆ. ಅದಲ್ಲದೆ ಪೇ ಮತ್ತು ಅಲೋಯನ್ಸ್ ಕೊಡುವಾಗ ತಾವು ಸ್ಪಷ್ಟವಾಗಿ "Daily allowance at Rs. 3 per head per day to the men on duty at the check posts and the Mobile Squads" ಎಂದು ಹೇಳಿದ್ದೀರಿ. ಇದು ಎಲ್ಲರಿಗೂ ಯುನಿಫಾರ್ಮ್ ಆಗಿ ಇರಬೇಕು. ತಾವು ಆಹಾರಧಾನ್ಯ ಸಾಗಾಣಿಕೆ ನಿರ್ಬಂಧಕ್ಕೋಸ್ಕರ ಹೊಸದಾಗಿ ನೇಮಿಸಿದ ಎಲ್ಲರಿಗೂ ಕೂಡಾ ಇದನ್ನು ಅನ್ವಯ ಮಾಡುತ್ತೀರಾ ಎಂದು ಕೇಳುತ್ತೇನೆ. ಎಲ್ಲರಿಗೂ ಏಕರೂಪತೆಯನ್ನು ಕೊಡಬೇಕೆಂದು ಹೇಳುತ್ತೇನೆ.

ಇನ್ನು ಹೋಮ್ ಗಾರ್ಡ್ಸ್ ವಿಷಯ ಹೇಳುವುದಾದರೆ, ಈ ಸಂದರ್ಭದಲ್ಲಿ ಹೋಮ್ ಗಾರ್ಡ್ಸ್ ಬಗ್ಗೆ ಹೆಚ್ಚಿನ ನಿಗಾ ವಹಿಸಿ ಹೋಮ್ ಗಾರ್ಡ್ಸ್ ಸಂಖ್ಯೆಯನ್ನು ಜಾಸ್ತಿ ಮಾಡುತ್ತಿದ್ದೇವೆ ಎಂದು ತಾವು ಹೇಳಿದ್ದೀರಿ, ಮತ್ತು ಹೋಮ್ ಗಾರ್ಡ್ಸ್ ತರಬೇತಿಗೆ ಪೋಲೀಸ್ ಇಲಾಖೆಯಿಂದ 16 ಸಬ್ ಇನ್‌ಸ್ಪೆಕ್ಟರ್‌ಗಳನ್ನೂ 34 ಹೆಡ್ ಕಾನಸ್ಟೇಬಲ್‌ಗಳನ್ನೂ ಡೆಪ್ಯೂಟ್ ಮಾಡತಕ್ಕದ್ದನ್ನು ಇಲ್ಲಿ ಹೇಳಿದ್ದೀರಿ. ನಾನಾದರೂ ಕೇಳುತ್ತೇನೆ. ಎಷ್ಟು ಮಂದಿ ಹೋಮ್ ಗಾರ್ಡ್ಸ್‌ಗೆ ಇವತ್ತು ತರಬೇತಿ ಕೊಟ್ಟಿದ್ದೀರಿ? ಹೋಮ್ ಗಾರ್ಡ್ಸ್ ಬಗ್ಗೆ ಯಾವ ತರಹ ಆಸಕ್ತಿ ವಹಿಸಿದ್ದೀರಿ? ಹೋಮ್ ಗಾರ್ಡ್ಸ್ ಆಕ್ಟನ್ನು ಮಾಡುವಾಗ ಪ್ರತಿಯೊಂದು ತಾಲ್ಲೂಕಿಗೂ ಒಂದು ಯೂನಿಟ್ಟು ಮಾಡಿ, ಆ ಯೂನಿಟ್ಟಿನ ಮುಖಾಂತರ ಹೋಮ್ ಗಾರ್ಡ್ಸ್ ಟ್ರೈನಿಂಗ್ ಕೊಡಬೇಕು ಎಂದು ಮಾಡಿದ್ದೀರಿ. ಇದರಲ್ಲಿ ಎಷ್ಟರ ತನಕ ಸರ್ಕಾರದವರು ಸಾಫಲ್ಯ ಹೊಂದಿದ್ದಾರೆಂಬುದನ್ನು ತಿಳಿಸಬೇಕು.

(ಶ್ರೀ ಸಿದ್ದಯ್ಯ ಕಾಶೀಮಠ್)

ಅಷ್ಟೇ ಅಲ್ಲದೆ ಹೋಂಗಾರ್ಡುಗಳಾಗುವುದಕ್ಕೆ ಉತ್ತಮವಾದ ಶಿಕ್ಷಣ ಸಹ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಡಿಮ್ಯಾಂಡ್ ನಂಬರು 17ರಲ್ಲಿ ಒಂದು ಸ್ತುತ್ಯ ಕಾರ್ಯವನ್ನು ಸರಕಾರದವರು ಮಾಡುತ್ತಿದ್ದಾರೆ. ಸಾಹಿತಿಗಳಿಗೆ ಒಳ್ಳೆಯ ಉತ್ತೇಜನ ಕೊಟ್ಟಿದ್ದಾರೆ. ಅದರಲ್ಲೂ ಮುಖ್ಯವಾಗಿ ಡಾ॥ ಕೆ. ವಿ. ಪುಟ್ಟಪ್ಪ ನವರಿಗೆ ಪೊಯಟ್-ಲಾರೆಟ್ ಎಂಬ ಡಿಗ್ರಿಯನ್ನು ಕೊಟ್ಟು ಅವರಿರುವವರೆಗೆ ಪ್ರತಿ ತಿಂಗಳೂ ಕೂಡ 500 ರೂಪಾಯಿಗಳ ಗೌರವ ಸಂಭಾವನೆ ಕೊಡಬೇಕೆಂದೂ ತೀರ್ಮಾನ ಮಾಡಿದ್ದಾರೆ. ಇದೇ ರೀತಿ ಅನೇಕ ಸಾಹಿತಿಗಳಿಗೆ ಸಹಾಯ ನೀಡಬೇಕಾಗಿದೆ. ಅವರ ಬಗ್ಗೆ ಸರ್ವೆ ಮಾಡಿ ಅರ್ಹರಾದವರಿಗೆ ಡಿಗ್ರಿಕೊಟ್ಟು ಆನರೇರಿಯಂ ಸಹ ಕೊಡಬೇಕೆಂದು ಸಲಹೆ ಮಾಡುತ್ತೇನೆ.

[MR. SPEAKER in the Chair].

20ನೆಯ ಡಿಮ್ಯಾಂಡಿನಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ಹೆಚ್ಚು ಹಣ ಖರ್ಚು ಮಾಡುವುದನ್ನು ತಿಳಿಸಿದ್ದಾರೆ. ಈ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಪಾಶ್ಚಾತ್ಯ ದೇಶಗಳಲ್ಲಿ ಪ್ರವಾಸ ಮಾಡಿ ಹೇಗೆ ಮೀನಿನ ಅಭಿವೃದ್ಧಿ ಮಾಡಬೇಕೆಂಬುದರ ಬಗ್ಗೆ ಮಾಹಿತಿ ಪಡೆದಿದ್ದಾರೆ. ಅವರು ನಮ್ಮ ದೇಶ ದಲ್ಲಿ ಪ್ರವಾಸ ಮಾಡಿದಾಗ ಕೆರೆ, ಕುಂಟೆಗಳಲ್ಲಿ ಆಹಾರದ ಉತ್ಪನ್ನವನ್ನು ಹೆಚ್ಚಿಸಲು ಮೀನಿನ ಅಭಿವೃದ್ಧಿ ಮಾಡಬೇಕೆಂದು ಅಲ್ಲಲ್ಲಿ ಭಾಷಣ ಮಾಡಿದಾಗ ಹೇಳಿದ್ದಾರೆ. ಈಗ ರಾಜ್ಯದಲ್ಲಿ ಎಲ್ಲಿ ಮೀನಿನ ಅಭಿವೃದ್ಧಿ ಮಾಡಬೇಕೆಂದು ಸರ್ವೆ ಮಾಡಿದ್ದಾರೆ? ಈ ರೀತಿ ಮಾಡಿ ಹೆಚ್ಚು ಉತ್ಪತ್ತಿ ಮಾಡ ಬೇಕಾದ್ದು ಅಗತ್ಯವೆಂದು ಸಲಹೆ ಮಾಡುತ್ತೇನೆ.

23ನೆಯ ಡಿಮ್ಯಾಂಡಿನಲ್ಲಿ ಗ್ರಾಮಾಂತರಗಳಲ್ಲಿ ಗೋಡೌನ್ ಕಟ್ಟಲು ಸಹಾಯ ಮಾಡುವ ವಿಚಾರವಿದೆ. ಹಾಗೆ ಮಾಡಿ ಹೆಚ್ಚು ಕಟ್ಟಬೇಕೆಂದು ಸಲಹೆ ಮಾಡುತ್ತೇನೆ.

ಕೋ-ಆಪರೇಟೀವ್ ಟ್ರಿಬ್ಯೂನಲ್ ರಚನೆ ವಿಚಾರ ಸಹ ನಮೂದಾಗಿದೆ. ಈ ಸಂಬಂಧವಾದ ಕೇಸುಗಳು ಹೆಚ್ಚಾಗಿರುವುದರಿಂದ ತುರ್ತು ಪರಿಸ್ಥಿತಿ ಇರುವ ಈ ಸಮಯದಲ್ಲಿ ಈ ಟ್ರಿಬ್ಯೂನಲ್ ಅನಾವಶ್ಯಕವೆಂದು ನಾನು ಅಭಿಪ್ರಾಯ ಪಡುತ್ತೇನೆ.

44ನೆಯ ಡಿಮ್ಯಾಂಡಿನಲ್ಲಿ ಕೈಗಾರಿಕೆ ವಿಚಾರವಿದೆ. ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ ಒದಗಿಸುವ ಕೆಲವು ಹಣ ಲ್ಯಾಪ್ಸ್ ಆಗುತ್ತಿದೆ. ಅದಕ್ಕೆ ಅವಕಾಶ ಕೊಡದೆ ಧಾರವಾಡಕ್ಕೆ ಸಹಾಯ ಮಾಡಿರುವ ಹಾಗೆ ಎಲ್ಲ ಕಡೆಯ ಕೈಗಾರಿಕೆಗಳಿಗೂ ಸಹಾಯ ಮಾಡಬೇಕು, ಕೈಗಾರಿಕಾ ಅಭಿವೃದ್ಧಿಗೆ ಹೆಚು ಗಮನ ಕೊಡಬೇಕು ಎಂದು ಸಲಹೆ ಮಾಡುತ್ತೇನೆ.

48ನೆಯ ಡಿಮ್ಯಾಂಡಿನಲ್ಲಿ ಮಂಗಳೂರಿನಲ್ಲಿ ವೆಜಿಟೆಬಲ್ ಸೀಡ್ ಫಾರಂಗೆ ಅವಕಾಶ ಮಾಡಿ ದ್ದಾರೆ. ಈಗ ತಯಾರಿಸುವ ಬೀಜ ಸಾಕಾದಷ್ಟು ಸಿಕ್ಕುತ್ತಿಲ್ಲ. ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕು.

54ನೆಯ ಡಿಮ್ಯಾಂಡಿನಲ್ಲಿ ಬಹಳ ಹಣ ಸಹಾಯ ಮಿಲ್ಲು ಮುಂತಾದವುಗಳಿಗೆ ಮಾಡಿದ್ದೀರಿ. ಸರಕಾರ ಷೇರು ಬಂಡವಾಳ, ಮತ್ತು ಸಹಾಯ ಧನ ಕೊಡುವಾಗ ಕೊಟ್ಟ ಹಣ ಯಾರಾದರೂ ದುರಪಯೋಗ ಮಾಡಿದರೆ ಅವರ ಬಗ್ಗೆ ಯೋಗ್ಯ ಕ್ರಮ ಕೈಕೊಳ್ಳಬೇಕು ಎಂದು ಸಲಹೆ ಮಾಡುತ್ತೇನೆ.

Mr. SPEAKER.—Before I call upon anybody else, let me clear one or two matters. I have received a list from one of the Parties, I believe it is from the P.S.P. Sri Bhaskar Setty has sent me four names. During the one hour allotted, besides the Leader of the Opposition taking as much time as he likes, having the first bite...

Sri H. R. KESHAVA MURTHY (Gandasi).—It is a question involving crores of rupees. Please extend the time for discussion, Sir.

Mr. SPEAKER.—Sri Gopala Gowda wanted the pledge to be taken. We will take it at 3-30 P. M. I would appeal to all the Members to be present. It will be only for two minutes.

Then instead of tea break for half-an-hour, why not continue the Debate and utilise that half-an-hour? So it becomes one hour and a half for this subject. I suppose that will be all right?

HON'BLE MEMBERS.—Yes.

Mr. SPEAKER.—After this is over, I would like to settle the order of the Bills. In view of the business, I said that we can sit on the 22nd morning and disperse.

Sri RAMAKRISHNA HEGDE.—I would also suggest that we may sit in the morning on 22nd so that we can complete the agenda that has been placed before the House.

Sri SIDDIAH KASIMATH.—It has been already suggested that we should finish on the 21st—morning and evening.

Mr. SPEAKER.—I will review the whole situation soon after the supplementary demands are passed.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ವಾಕ್‌ಪತಿಗಳೆ......

Sri H. R. KESHAVA MURTHY.—On a point of order, Sir. ಈ ಪ್ರಪಂಚದಲ್ಲಿ ಇದುವರೆಗೆ ಎಲ್ಲೂ ಅಧ್ಯಕ್ಷರನ್ನು ವಾಕ್‌ಪತಿಗಳು ಎಂದು ಯಾರೂ ಸಂಭೋದಿಸಿರಲಿಲ್ಲ. ಆ ರೀತಿ ಹೇಳಬಹುದೆ? ಅದು ಸರಿಯೇ?

Mr. SPEAKER.—He is entirely wrong.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈ ಸಪ್ಲಿಮೆಂಟರಿ ಡಿಮ್ಯಾಂಡಿನ ಮೇಲೆ ಮಾತನಾಡುತ್ತಾ ವಿರೋಧ ಪಕ್ಷದ ನಾಯಕರು ಈಗಿನ ತುರ್ತು ಪರಿಸ್ಥಿತಿಯಲ್ಲಿ ಸರಕಾರ ಯಾವ ವಿವೇಚನೆಯೂ ಇಲ್ಲದೆ ಹೇಗೆ ವೆಚ್ಚ ಮಾಡುತ್ತಿದೆ ಎಂಬುದನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ತುರ್ತು ಪರಿಸ್ಥಿತಿಯಲ್ಲಿ ಸರಕಾರ ರಾಜ್ಯ ರಕ್ಷಣೆಗೆ ಈ ಹಣ ಖರ್ಚು ಮಾಡುತ್ತೇವೆಂದು ಹೇಳಿದ್ದರೆ ತಕ್ಷಣ ಓಟು ಮಾಡಬಹುದಾಗಿತ್ತು; ಓಟಿಗೆ ಹಾಕಿದ್ದರೆ ಒಪ್ಪಬಹುದಾಗಿತ್ತು. ಆದರೆ ಈ ದಿವಸ ಮಾಡಿರುವ ಖರ್ಚುವೆಚ್ಚ ನೋಡಿದರೆ ಯಾವುದಕ್ಕೂ ಡಿಫೆನ್ಸ್ ಆಫ್ ಇಂಡಿಯಾ ಕಾನೂನನ್ನು ಪ್ರಯೋಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿರುವಂತೆ ಕಾಣುತ್ತದೆ. 10ನೆಯ ಡಿಮ್ಯಾಂಡಿನಲ್ಲಿ ಮಾಡಿರುವ ಖರ್ಚನ್ನು ನೋಡಿದರೆ ಅದು ನಿಜವಾಗಿ ಯೋಗ್ಯವಾದ ಖರ್ಚೇ ಎಂದು ಕೇಳುತ್ತೇನೆ. ಈ ದಿವಸ ಹಣ ಉಳಿಸಬೇಕು ನ್ಯಾಷನಲ್ ಸೇವಿಂಗ್ಸ್ ಆಗಬೇಕು, ಪ್ರತಿಯೊಬ್ಬರೂ ಕೂಡ ಆದಷ್ಟು ಉಳಿತಾಯ ಮಾಡಬೇಕು ಎಂದು ಹೇಳುತ್ತಿರುವಾಗ 10ನೆಯ ಡಿಮ್ಯಾಂಡಿನ ಪ್ರಕಾರ ಖರ್ಚು ಮಾಡಿರುವ 2 ಲಕ್ಷ 25 ಸಾವಿರ ರೂಪಾಯಿ ಸಾರ್ಥಕವಾದ ಖರ್ಚೇ, ಯಾವ ದೇವರಿಗೆ ಪ್ರೀತಿ ಎಂದು ಕೇಳುತ್ತೇನೆ. 8 ಕಾರುಗಳನ್ನು ಕೊಳ್ಳುವ ಅಗತ್ಯ ಇತ್ತೆ? ಇದನ್ನು ಅನೇಕ ಸಾರಿ ಹೇಳಿದ್ದೇವೆ.

3-00 P.M.

ಎಂಟು ಕಾರುಗಳನ್ನು ಏಕೆ ಕೊಂಡುಕೊಂಡರು? ಒಂದು ಸಾರಿ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಆಗಿನ ಹಣಕಾಸಿನ ಸಚಿವರು ಹೇಳಿದರು, ನಮ್ಮ ಗೆಸ್ಟ್ ಹೌಸಿನಲ್ಲಿರುವ ಕಾರುಗಳನ್ನು ಮಾರಾಟ ಮಾಡುತ್ತೇವೆ, ಅದಕ್ಕೆ ಬದಲಾಗಿ ಸಣ್ಣ ಸಣ್ಣ ಕಾರುಗಳನ್ನು ಕೊಂಡುಕೊಳ್ಳುತ್ತೇವೆ, ಅವು ಐದು ಲೀಟರುಗಳಿಗೆ 30-35 ಮೈಲಿ ಕೊಡುತ್ತವೆ, ಹಣವನ್ನು ಉಳಿಸತಕ್ಕ ಕಾರುಗಳನ್ನು ಉಪಯೋಗಿಸುತ್ತೇವೆ ಎಂದು ಹೇಳಿದರು. ಇವತ್ತು 8 ಕಾರುಗಳ್ನು 2 ಲಕ್ಷ 25 ಸಾವಿರ ರೂಪಾಯಿಗಳಿಗೆ ಕೊಂಡುಕೊಂಡಿದ್ದಾರೆ. ಈ ಕಾರುಗಳನ್ನು ಕೊಂಡುಕೊಳ್ಳುವುದಕ್ಕೆ ಬದಲಾಗಿ ಅದೇ ಹಣವನ್ನು ಖರ್ಚುಮಾಡಿ ಸಣ್ಣ ಸಣ್ಣ ಕೆರೆಗಳನ್ನು ಕಟ್ಟಿದ್ದರೆ ಒಂದೊಂದು ಕೆರೆ ಕೆಳಗೆ 50 ಎಕರೆ ಭೂಮಿ ಸಾಗುವಳಿಗೆ ಬಂದಿದ್ದರೆ 200 ಎಕರೆಗೆ ನೀರಾವರಿಯಾಗುತ್ತಿತ್ತು. ನಮಗೆ ಅನ್ನ ಬೇಕು, ಆಹಾರದ ಉತ್ಪನ್ನ ಸಾಲದು ಎಂದು ಹೇಳುವ ಈ ಕಾಲದಲ್ಲಿ ಸಣ್ಣ ನೀರಾವರಿಗೆ ಹಣವನ್ನು ಖರ್ಚು ಮಾಡಿದ್ದರೆ ಹೆಚ್ಚು ಬೆಳೆಯುವುದಕ್ಕೆ ಅನುಕೂಲವಾಗುತ್ತಿತ್ತು.

[MR. DEPUTY SPEAKER in the Chair]

ಈ ಕಾರುಗಳನ್ನು ಕೊಂಡುಕೊಳ್ಳುವಾಗ ಸರ್ಕಾರದಲ್ಲಿ ಎಷ್ಟು ಕಾರುಗಳಿವೆ ಎನ್ನುವುದನ್ನು ತಿಳಿಸಿದ್ದೀರಾ? ಗೆಸ್ಟ್ ಹೌಸ್‌ಗಳಲ್ಲಿ, ಮೈಸೂರು ಸರ್ಕಾರದ ಆಫೀಸುಗಳಲ್ಲಿ, ಶಾಸಕರ ಗೃಹದಲ್ಲಿ, ಮಂತ್ರಿಗಳ ಹತ್ತಿರ ಎಷ್ಟು ಕಾರುಗಳಿವೆ ಇವುಗಳಲ್ಲಿ ಎಷ್ಟು ಅನುಪಯೋಗವಾಗಿವೆ, ಈ ಕಾರು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಗಳನ್ನೆಲ್ಲಾ ಏನು ಮಾಡಿದಿರಿ ಎಂದು ಕೇಳುತ್ತೇನೆ ? ಸರ್ಕಾರದ ವಿವಿಧ ಇಲಾಖೆಗಳಲ್ಲಿ ಎಷ್ಟು ಕಾರುಗಳಿವೆ ಎಂದು ಹಿಂದೆ ಕೇಳಿದಾಗ ಆಗಿನ ಹಣಕಾಸಿನ ಸಚಿವರು ಒಂದು ಪಟ್ಟಿಯನ್ನು ಸಭೆಯ ಮುಂದೆ ಇಡುವುದಾಗಿ ಹೇಳಿದ್ದರು. ಆದರೆ ಹಾಗೆ ಯಾವ ಪಟ್ಟಿಯನ್ನೂ ಸಭೆಯ ಮುಂದೆ ಇಡಲಿಲ್ಲ. 8 ಕಾರುಗಳನ್ನು ಕೊಂಡುಕೊಳ್ಳುವಾಗ 1962 ನೇ ಇಸವಿಯಲ್ಲಿ ಅಧಿಕಾರಕ್ಕೆ ಬಂದಂಥ ಎಲ್ಲ ಮಂತ್ರಿಗಳಿಗೂ, ಉಪಮಂತ್ರಿಗಳಿಗೂ ಮತ್ತು ಪಾರ್ಲಿಮೆಂಟರಿ ಕಾರ್ಯದರ್ಶಿಗಳಿಗೂ, ಅವರು ಕೊಂಡುಕೊಳ್ಳುವುದಕ್ಕೆ ಇಚ್ಛೆ ಇದ್ದವರಿಗೆ ಕಾರುಗಳನ್ನು ಕೊಟ್ಟಿದ್ದೇವೆ, ಯಾರು ಕಾರು ಬೇಕು ಎಂದು ಕೇಳಿದರೋ ಅವರಿಗೆ ಕಾರುಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದರು. ಹೀಗಿರುವಾಗ ಇವತ್ತು ಪುನಃ 8 ಕಾರುಗಳನ್ನು ಕೊಂಡುಕೊಳ್ಳತಕ್ಕ ಅಗತ್ಯವೇನಿತ್ತು ಎನ್ನುವುದನ್ನು ಸರ್ಕಾರ ಹೇಳಬೇಕು. ಈಗಿನ ತುರ್ತು ಪರಿಸ್ಥಿತಿಯಲ್ಲಿ ಕಾರುಗಳನ್ನು ಕೊಂಡುಕೊಳ್ಳಲು ಈ ಹಣವನ್ನು ಖರ್ಚು ಮಾಡುವುದು ಸಾಧುವಲ್ಲ ಎಂದು ಸರ್ಕಾರಕ್ಕೆ ಹೇಳುತ್ತೇನೆ.

ಒಂದು ಸಮಯದಲ್ಲಿ ಈಗಿನ ಮುಖ್ಯ ಮಂತ್ರಿಗಳು ಹೇಳಿದರು : ಮುಖ್ಯ ಮಂತ್ರಿಗಳೂ ಮತ್ತು ವಿದ್ಯಾ ಮಂತ್ರಿಗಳೂ ಉಪಯೋಗಿಸುವ ಕಾರುಗಳು ದೊಡ್ಡ ಸಮುದ್ರವನ್ನಾದರೂ ಕುಡಿಯುತ್ತವೆ, ಅವುಗಳನ್ನು ಮಾರಾಟ ಮಾಡಬೇಕು ಎಂದು. ಆದರೆ ಸರ್ಕಾರದವರು ಈಗ ಕೊಂಡುಕೊಂಡಿರುವ ಕಾರುಗಳನ್ನು ನೋಡಿದರೆ ಆ ಎರಡು ಕಾರುಗಳು ಕುಡಿಯುವಷ್ಟು ಪೆಟ್ರೋಲನ್ನು ಒಂದು ಕಾರೇ ಕುಡಿಯುವ ಹಾಗೆ ಇದೆ. ಈ ಕಾರುಗಳನ್ನು ಕೊಂಡುಕೊಂಡ ಮೇಲೆ ಒಂದು ಸಮಯದಲ್ಲಿ ಮುಖ್ಯ ಮಂತ್ರಿಗಳು ಹೇಳಿದರು, ಈಗಿನ ತುರ್ತು ಪರಿಸ್ಥಿತಿಯಲ್ಲಿ ಬಾಲಬ್ರೂಯಿಂದ ವಿಧಾನಸೌಧಕ್ಕೆ ಮತ್ತು ವಿಧಾನಸೌಧದಿಂದ ಬಾಲಬ್ರೂಯಿಗೆ ನಡೆದುಕೊಂಡು ಓಡಾಡುತ್ತೇನೆ, ಹಣಕಾಸನ್ನು ಉಳಿಸಲಿಕ್ಕೆ ಎಂದು.

Sri RAMAKRISHNA HEGDE.—I am sorry none of these cars has arrived yet.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಇಂದಿನ ತುರ್ತು ಪರಿಸ್ಥಿತಿಯಲ್ಲಿ ತುರ್ತು ಪರಿಸ್ಥಿತಿ ಇದೆ ಎಂದು ರಾಜ್ಯದಲ್ಲಿ ಹೇಳುವುದಕ್ಕೆ ಮಾತ್ರ ಇದೆ, ಸರ್ಕಾರಕ್ಕೆ ಇಲ್ಲ ಎಂದು ಹೇಳಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಆ ಕಾರುಗಳು ಇನ್ನೂ ಬಂದಿಲ್ಲವೆಂದು ಹೇಳಿದರು. ಅವರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಕಾರುಗಳಿಗೆ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ನಿಗೆ ಹಣವನ್ನು ಕೊಡದೆ ಇದ್ದರೆ ಹಣ ಕೊಡುವುದನ್ನು ನಿಲ್ಲಿಸಿಬಿಡಿ ಎಂದು ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ಹಣ ನಮಗೆ ಬೇಕು ಎಂದು ಕೇಳಿಕೊಳ್ಳುವಂಥ ಪರಿಸ್ಥಿತಿಯಲ್ಲಿ ಕಾರುಗಳನ್ನು ಕೊಂಡುಕೊಳ್ಳುವುದಕ್ಕೆ ಏಕೆ ಹಣವನ್ನು ಖರ್ಚು ಮಾಡಬೇಕು ? ಇದಕ್ಕೆ ಬೇರೆ ತೆರಿಗೆಯನ್ನು ಹಾಕಬೇಕು ಎಂದು ಹೇಳುತ್ತಾರೆ. ಐದು ಕೋಟಿ ರೂಪಾಯಿ ಭೂ ಕಂದಾಯವನ್ನು ವಸೂಲ್ಮಾಡಬೇಕು ಎಂದು ಹೇಳುತ್ತಾರೆ. ನಮ್ಮಲ್ಲಿ ಹಣವಿಲ್ಲದೆ ಇರುವಾಗ ದೇಶಾಭಿಮಾನಿಗಳೂ ಮತ್ತು ರಾಜ್ಯದಲ್ಲಿ ಒಂದು ಉನ್ನತ ಸ್ಥಾನದಲ್ಲಿರುವ ಯುವಕರಾದಂಥ ಹಣಕಾಸಿನ ಸಚಿವರಾದ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಹಣವನ್ನು ಖರ್ಚು ಮಾಡುವಾಗ ವಿವೇಕದಿಂದ, ಬುದ್ಧಿವಂತಿಕೆಯಿಂದ ಒಂದೊಂದು ಕಾಸನ್ನೂ ಖರ್ಚು ಮಾಡಬೇಕೆಂದು ಅವರಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ 8 ಕಾರುಗಳು ನಮಗೆ ಇನ್ನೂ ತಲುಪಿಲ್ಲದೆ ಹೋದರೆ, ಅವು ಡೆಲ್ಲಿಯಲ್ಲಿಯೇ ಇದ್ದರೆ, ನಮಗೆ ಈ ಕಾರುಗಳು ಬೇಕಾಗಿಲ್ಲ, ನಮ್ಮಲ್ಲಿ ಇರುವ ಕಾರುಗಳಲ್ಲಿಯೇ ನಾವು ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತೇವೆ ಎಂದು ಹೇಳಬೇಕು. ಇದನ್ನು ಸರ್ಕಾರದವರು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಸ್ವಾಮಿ, ಡಿಮಾಂಡ್ 8 ರಲ್ಲಿ ತರಕಾರಿ, ಹಣ್ಣು ಹಂಪಲು ಬೆಳೆಯಬೇಕೆಂಬ ಒಂದು ಯೋಜನೆಯನ್ನು ಕೇಂದ್ರ ಸರ್ಕಾರದವರು ಮಂಜೂರು ಮಾಡಿ ಇಲ್ಲಿಗೆ ಕಳಿಸಿಕೊಟ್ಟರು. ಅದನ್ನು ಎಲ್ಲಿ ಮಾಡಬೇಕೆಂದು ಸಹ ಯೋಚನೆ ಮಾಡಿದ್ದರು. ಆದರೆ ಮೊದಲು ಮಾಡಬೇಕೆಂದಿದ್ದ ಸ್ಥಳವನ್ನು ತಪ್ಪಿಸಿ ಇವತ್ತು ಒಂದು ಎಕರೆಗೆ ಐದು ಸಾವಿರ ರೂಪಾಯಿನಂತೆ ಕೊಟ್ಟು ಭೂಮಿಯನ್ನು ಸ್ವಾಧೀನ ಮಾಡಿಕೊಂಡು, ಕೊಡುವ ಹಣದಲ್ಲಿ ಭೂಮಿ ಮತ್ತು ಸಿಬ್ಬಂದಿಗಾಗಿ ಖರ್ಚು ಮಾಡಿದರೆ ಅದರಿಂದ ಏನು ಬರುತ್ತದೆ ಎಂದು ಕೇಳುತ್ತೇನೆ. ದುಡ್ಡಿಲ್ಲದೆ ಹೋದರೆ ಏನು ತಾನೆ ಬೆಳೆಯುವುದಕ್ಕಾಗುತ್ತದೆ ? ಈ ಯೋಜನೆಯನ್ನು ಕಾರ್ಕಳದಲ್ಲಿ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಮೊದಲು ಯೋಚನೆ ಮಾಡಿದ್ದರು. ಅಲ್ಲಿ 50 ಎಕರೆ ಭೂಮಿ ತೋಟಗಾರಿಕೆ ಇಲಾಖೆಗೆ ಸೇರಿದ್ದು ಇದೆ. ಅದರ ಪಕ್ಕದಲ್ಲಿಯೇ ಸರ್ಕಾರಕ್ಕೆ ಸೇರಿದ 150 ಎಕರೆ ಭೂಮಿ ಇದೆ. ಅದು ಬಹಳ ಶ್ರೇಷ್ಠವಾದ ಭೂಮಿಯಾಗಿದ್ದು ಅದಕ್ಕೆ ಅಗತ್ಯವಾಗಿ ಬೇಕಾದ ನೀರು ಸಹ ಇದೆ. ಅಲ್ಲಿರುವ ಜಮೀನನ್ನು ತರಕಾರಿ ಮತ್ತು ಹಣ್ಣು

ಹಂಪಲು ಬೆಳೆಯುವುದಕ್ಕೆ ತೆಗೆದುಕೊಳ್ಳದೆ ಒಂದು ಎಕರೆಗೆ ಐದು ಸಾವಿರ ರೂಪಾಯಿ ಕೊಟ್ಟು ತೆಗೆದುಕೊಂಡಿರುವ ಭೂಮಿಯಲ್ಲಿ ದಂಟು ಬೆಳೆಯುತ್ತೀರಾ, ಮೂಲಂಗಿ ಬೆಳೆಯುತ್ತೀರಾ, ಬದನೆ ಕಾಯಿ ಬೆಳೆಯುತ್ತೀರಾ, ಹಸಿ ಮೆಣಸಿನಕಾಯಿ ಬೆಳೆಯುತ್ತೀರಾ ಎಂದು ಕೇಳುತ್ತೇನೆ. ದೇಶದ ತುರ್ತು ಪರಿಸ್ಥಿತಿಯಲ್ಲಿ ಇದನ್ನು ಸ್ವಲ್ಪ ಯೋಚನೆ ಮಾಡಬೇಕು. ಸರ್ಕಾರ ಈ ರೀತಿ ಮಾಡಿರುವುದು ಸರಿಯೇ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. He is not growing any vegetables; he is not growing fruits and he is not giving any advice. He is going round about the political leaders. The Director of Horticulture is more a politician than Government servant. This Horticulture Department is going to spend 3·51 lakhs. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಮೂರೂವರೆ ಲಕ್ಷ ರೂಪಾಯಿಗಳನ್ನು ಒಬ್ಬ ರಾಜಕೀಯದಲ್ಲಿ ತೊಡಗಿರುವ ಅಧಿಕಾರಿಗೆ ಕೊಟ್ಟು, ಎಲ್ಲಿ ಜಾಗ ಸರಿಯಾಗಿದೆ ಅಲ್ಲಿ ಖರ್ಚು ಮಾಡದೆ ರಾಜಕೀಯ ವನ್ನು ಹಿಡಿದುಕೊಂಡು ಹಣವನ್ನು ಖರ್ಚು ಮಾಡುವುದಾದರೆ ಅಂಥ ಅಧಿಕಾರಿಯ ಮೇಲೆ ಸೂಕ್ತ ವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಸೂಚನೆ ಮಾಡುತ್ತಿದ್ದೇನೆ. ಈ ಅಧಿಕಾರಿ ರಾಜಕೀಯ ಮಾಡಿದ್ದಾನೆ. ವಿಧಾನ ಪರಿಷತ್ತಿನ ಚುನಾವಣೆಗಳಲ್ಲಿ ಈತನು ಕಾಂಗ್ರೆಸ್ಸಿಗೆ ವಿರೋಧವಾಗಿ ಕೆಲಸ ಮಾಡಿದ್ದಾನೆ.

Have you made attempts to know whether he grows vegetables or fruits or whether he is a politician? It is he who is going to spend the money and give advice.

Mr. DEPUTY SPEAKER.—The individuality or personality of the individual has nothing to do with this subject.

Sri C. J. MUCKANNAPPA.—I am not mentioning his name. Unless I put it as Director or Assistant Director Government may not be in a position to know who is indulging in politics. That is why I mentioned the designation of the officer. He may be 'X' or 'Y'. ಅದಕ್ಕೋಸ್ಕರ ನಾನು ತಮ್ಮಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಇದರಲ್ಲಿ ರಾಜಕೀಯ ಇರಬಾರದು. ಈ ಅಧಿಕಾರಿ ತನ್ನ ಮನೆಯಲ್ಲಿ ಟೀ ಪಾರ್ಟಿ ಮತ್ತು ಡಿನ್ನರ್ ಪಾರ್ಟಿ ಗಳನ್ನು ವ್ಯವಸ್ಥೆ ಮಾಡಿ ರಾಜಕೀಯದಲ್ಲಿ ತೊಡಗಿದ್ದಾರೆ. ಇಂಥವರ ಕೈಯಲ್ಲಿ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ಖರ್ಚು ಮಾಡುವುದಾದರೆ ದೇಶದ ತುರ್ತು ಪರಿಸ್ಥಿತಿಯಲ್ಲಿ ಎಷ್ಟು ಮಾತ್ರ ತರಕಾರಿ, ಹಣ್ಣು ಹಂಪಲುಗಳನ್ನು ಬೆಳೆಯಬಹುದು ಎನ್ನುವುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಕಾರ್ಕಳದ ಬಳಿ ಒಳ್ಳೆಯ ಭೂಮಿ ಇದೆ, ಶ್ರೇಷ್ಠವಾದ ನೀರು ಇದೆ. ಇಂಥ ಸ್ಥಳ ವನ್ನು ತಪ್ಪಿಸಿರುವುದನ್ನು ನೋಡಿದರೆ ಇದರಲ್ಲಿ ರಾಜಕೀಯವಿದೆ ಎಂದು ಕಾಣುತ್ತದೆ. ಕೇಂದ್ರ ಸರ್ಕಾರದವರು ಈ ಯೋಜನೆಗೆ ಮಂಜೂರು ಮಾಡಿರುವ ಹಣ ನಿರುಪಯೋಗವಾಗದ ರೀತಿಯಲ್ಲಿ ಶೀಘ್ರದಲ್ಲಿ ಫಲ ದೊರಕುವಂತೆ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರದವರು ಅನೇಕ ತಪ್ಪು ಗಳನ್ನು ಮಾಡಿದ್ದರೂ ಇಂತಹ ಪರಿಸ್ಥಿತಿಯಲ್ಲಿ ಈಗ ನಾವು ಅವರ ಜೊತೆಯಲ್ಲಿ ಇರುವುದಕ್ಕೆ ಸಿದ್ಧರಿದ್ದೇವೆ. ಈ ತುರ್ತುಪರಿಸ್ಥಿತಿಯಲ್ಲಿ ಹಣವನ್ನು ವೆಚ್ಚಮಾಡುವಾಗ ಇವರು ತಮ್ಮ ಅಧಿಕಾರ ವನ್ನು ದುರುಪಯೋಗ ಮಾಡಕೂಡದು.

ಇನ್ನು ಪುಟ 14ರಲ್ಲಿ ಡಿಮ್ಯಾಂಡ್ ನಂಬರ್ 23. "Sanction was accorded by Government for constitution of the Mysore Co-operative Appellate Tribunal" ಎಂದಿದೆ.

ಇವತ್ತು ಕೋ-ಆಪರೇಟಿವ್ ಆಕ್ಟಿಗೆ ಒಂದು ಅಪೆಲೇಟ್ ಟ್ರಿಬ್ಯೂನಲ್ ಎಂದು ಒಂದು ತಿದ್ದುಪಡಿಯನ್ನು ತಂದು ನಮ್ಮ ಒಪ್ಪಿಗೆ ಆ ಬಗ್ಗೆ ತೆಗೆದುಕೊಂಡು ಈಗ ಇನ್ನೊಂದು ಟ್ರಿಬ್ಯೂನಲ್ಲನ್ನು ನೇಮಕಮಾಡುವ ನೆಪದಿಂದ ಇದನ್ನು ತಂದಿದ್ದಾರೆ. ಇದರಿಂದುಂಟಾಗತಕ್ಕ ಡಿಸ್‌ಪ್ಯೂಟ್‌ಗಳನ್ನು ಸೆಟಲ್ ಮಾಡುವುದಕ್ಕೆ ಇವುಗಳಿಗೆ ಸ್ವಲ್ಪ ಕಾಲ ಅಧಿಕಾರವಿತ್ತು. ನಾನು ಹೇಳುವುದಿಷ್ಟೆ. ಈ ಆಕ್ಟ್ ಯಾವ ದಿವಸ ಜಾರಿ ಯಲ್ಲಿ ಬರುತ್ತದೋ ಅದೇ ದಿವಸವೇ ಆಕ್ಟ್ ಆಗಬೇಕು.

ಶ್ರೀ ರಾಮಕೃಷ್ಣ ಹೆಗ್ಗಡೆ.—ಕೋ-ಆಪರೇಟಿವ್ ಟ್ರಿಬ್ಯೂನಲ್ ರಚನೆ ಮಾಡದೆ ಈ ತಿದ್ದುಪಡಿ ಯನ್ನು ಎನ್‌ಫೋರ್ಸ್ ಮಾಡಲು ಸಾಧ್ಯವಾಗುತ್ತಿರಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ ಸರ್ಕಾರದವರೇ ಇಂಥಾದ್ದು ಬೇಡವೆಂದು ಹೇಳು ವುದಕ್ಕೆ ಒಂದು ತಿದ್ದುಪಡಿಯನ್ನು ತರಬೇಕಾಗಿತ್ತು. ಆದರೆ ಇವರಿಗೆ ನಾವು ಟ್ರಿಬ್ಯೂನಲ್‌ಮಾಡ ಬೇಡಿ ಎಂಬುದಾಗಿ ಹೇಳಿಲ್ಲ. ಇವತ್ತು ಅದು ಬೇಕಿರಲಿಲ್ಲ. ಇದರಲ್ಲಿ ಹೃದಯ ಭೇದಿಸತಕ್ಕ ವಿಷಯ ವೆಂದರೆ, ಈ ಅಪೆಲೇಟ್ ಟ್ರಿಬ್ಯೂನಲ್ಲಿಗೆ ಎರಡು ಮೂರು ಬೇಂಚಸ್ ಸೇರಿಸುವ ಅವಶ್ಯಕತೆ ಏನಿತ್ತು ? ಈ ಒಂದು ಟ್ರಿಬ್ಯೂನಲ್, ಒಂದು ಕಮಿಟಿ, ಒಂದು ಬೋರ್ಡ್-ಹೀಗೆ ಮಾಡುತ್ತಾ ಹೋದರೆ ಇಂತಹ ತುರ್ತು ಪರಿಸ್ಥಿತಿಯಲ್ಲಿ ಹಣವನ್ನು ಉಳಿಸುವುದಕ್ಕೆ ಖಂಡಿತ ಸಾಧ್ಯವಿಲ್ಲ. ನಿನ್ನೆ ರಾತ್ರಿ ಮಹಾ ಪ್ರಧಾನಿಯವರು ರೇಡಿಯೊ ಭಾಷಣಮಾಡುತ್ತಾ ಬಂಗಾರ ಕೊಡಿ; 10 ಗ್ರಾಂ ಚಿನ್ನಕ್ಕೆ ವರ್ಷಕ್ಕೆ 2 ರೂಪಾಯಿಗಳ ಬಡ್ಡಿ ಕೊಡುತ್ತೇವೆ ಎಂದು ಹೇಳುವಾಗ ಅದನ್ನು ಬಳಸತಕ್ಕವರಿಗೆ ಈ ರೀತಿ ಹೇಳುವುದರ ಉದ್ದೇಶವೇನು ? ಆದ್ದರಿಂದ ಮತ್ತೊಮ್ಮೆ ಸರ್ಕಾರದವರು ಈ ವಿಚಾರವನ್ನು ಪರಿಶೀಲನೆ ಮಾಡಬೇಕು.

ಇನ್ನು ಪುಟ 20, ಡಿಮ್ಯಾಂಡ್ ನಂಬರ್ 31ರ ವಿಚಾರವಾಗಿ ಹೇಳುವುದಾದರೆ, Mysore State is a state full of Engineers ಎಂದು ಹೇಳಬಹುದು. ಮಂತ್ರಿಮಂಡಲ ಎಷ್ಟು ದೊಡ್ಡದೋ ಮೈಸೂರು ಮರಾಮತ್ತು ಶಾಖೆಯು ಅಷ್ಟೇ ಚೀಫ್ ಇಂಜನಿಯರುಗಳಿಂದ ಕೂಡಿ ದೊಡ್ಡದಾಗಿದೆಯೆಂದು ಹೇಳಬಹುದು. ಎಲ್ಲೋ ಎರಡು ಮೂರು ಕಡಿಮೆ ಇರಬಹುದು. ಮೇಜರ್ ಇರ್ರಿಗೇಷನ್ನಿಗೇ ಒಬ್ಬರು, ಮೈನರ್ ಇರ್ರಿಗೇಷನ್ನಿಗೇ ಒಬ್ಬರು, ಜನರಲ್ ಇರ್ರಿಗೇಷನ್ನಿಗೇ ಒಬ್ಬರು, ಗೆರೆ ಹಾಕುವುದಕ್ಕೆ ಒಬ್ಬರು, ಪ್ಲಾನ್ ಮಾಡುವುದಕ್ಕೆ ಒಬ್ಬರು, ಇನ್‌ವೆಸ್ಟಿ ಗೇಷನ್ನಿಗೇ ಒಬ್ಬರು, ಜಲ್ಲಿ ಹಾಕುವುದಕ್ಕೇ ಒಬ್ಬರು-ಹೀಗೆ ಇಷ್ಟು ಚೀಫ್ ಇಂಜನಿಯರು ಗಳು ಬೇಡ. ಮೈಸೂರು ಇಷ್ಟು ದೊಡ್ಡದಾಗಿದ್ದರೂ 3-4 ಜನ ಚೀಫ್ ಇಂಜಿನಿಯರುಗಳು ಸಾಕಾಗಿತ್ತು. ಎಷ್ಟೋ ಜನರನ್ನು ಚೀಫ್ ಇಂಜನಿಯರುಗಳನ್ನಾಗಿ ನೇಮಕಮಾಡಿ ಸಂಬಳ ತೆಗೆದು ಕೊಳ್ಳಿ ಎಂದು ಹೇಳುತ್ತಾರೆ. ಮೈಸೂರು ಪಿ.ಡಬ್ಲ್ಯು.ಡಿ. ಮಂತ್ರಿಗಳ, ಪಾರ್ಲಿಮೆಂಟರಿ ಸೆಕ್ರೆಟರಿ ಮತ್ತೆ ಮೈನರ್ ಇರ್ರಿಗೇಷನ್ನಿನ ಉಪಮಂತ್ರಿಗಳಾದ ಶ್ರೀಮಾನ್ ಅಲೂರು ಹನುಮಂತಪ್ಪನವರು 55 ಕೋಟಿ ರೂಪಾಯಿಗಳ ಮಾಸ್ಟರ್ ಪ್ಲಾನ್ ಮಾಡಿ ದೆಹಲಿಯಿಂದ ಬರತಕ್ಕ ಹಣವನ್ನು ಖರ್ಚು ಮಾಡುತ್ತೇವೆಂದು ಹೇಳುತ್ತಾರೆ. He is ready with a Master Plan for Minor Irrigation.

ಚೀಫ್ ಇಂಜಿನಿಯರ್ ಫಾರ್ ಇರ್ರಿಗೇಷನ್ ಇರುವುದು ದುಂದು ಅಲ್ಲವೇ ? ಇವರಿಗೆ ಬೇಕಾದ ವರಿಗೆ ಅಂತಹ ಕೆಲಸಗಳನ್ನು ಕೊಡಬೇಕಾದರೆ ಕೇಂದ್ರ ಸರ್ಕಾರಕ್ಕೆ ಕೇಳಲಿ ಮತ್ತು ಇವರಲ್ಲಿ ಏನಾ ದರೂ ಅಂತಹ ಅಧಿಕಾರಿಗಳು ಸರ್ಪ್ಲಸ್ ಇದ್ದರೆ ಕೇಂದ್ರ ಸರ್ಕಾರದವರು ತೆಗೆದುಕೊಳ್ಳಲಿ ಎಂದು ಹೇಳಿ. ಅಂತಹವರನ್ನು ಬೇಕಾದರೆ ಇಲ್ಲಿಂದ ಲೆಂಡ' ಮಾಡಿ. ಮುಖ್ಯವಾಗಿ ಈ ಸರ್ಕಾರದ ದೃಷ್ಟಿ ಮಿತವ್ಯಯದ ಕಡೆಗೆ ಬರಬೇಕೆಂದು ನಾನು ಹೇಳುತ್ತೇನೆ. ಆಹಾರವನ್ನು ಸಾಕಷ್ಟು ಬೆಳೆಯಲಿಕ್ಕೆ ಸಾಕಷ್ಟು ಹಣ ಇವರಲ್ಲಿ ಇಲ್ಲದೇ ಇರುವಾಗ ಇಷ್ಟು ಚೀಫ್ ಇಂಜನಿಯರುಗಳ ಸಿಬ್ಬಂದಿ ಹೆಚ್ಚು ಬೇಡ. ಏಕೆಂದರೆ ಇವರದೇ ಒಂದು ರಾಜಕೀಯ ಈ ಮೈಸೂರು ರಾಜ್ಯದಲ್ಲಿದೆ. ಪ್ರತಿಯೊಂದೊಂದು ಹೊಸ ಕಾಮಗಾರಿ ಯೋಜನೆ ಮಾಡಬೇಕಾದರೆ ಹೊಸ ಹೊಸದಾಗಿ ಚೀಫ್ ಇಂಜನಿಯರುಗಳನ್ನು ನೇಮಕ ಮಾಡುವುದನ್ನು ಕೂಡಲೇ ನಿಲ್ಲಿಸಿ. ಹಣಕಾಸಿನ ಸಚಿವರಲ್ಲಿ ನನ್ನ ಬೇಡಿಕೆ ಏನೆಂದರೆ, ಇನ್ನು ಮುಂದೆ ಹೆಚ್ಚಿಗೆ ಚೀಫ್ ಇಂಜನಿಯರುಗಳನ್ನು ನೇಮಿಸುವುದು ಬೇಡವೆಂಬುದು. ಆದ್ದರಿಂದ ಮಾನ್ಯ ಸಚಿ ವರು ನಾನು ಹೇಳಿದ ವಿಷಯಗಳ ಕಡೆಗೆ ಹೆಚ್ಚು ಗಮನಕೊಡುತ್ತಾರೆಂದು ನಾನು ಭಾವಿಸುತ್ತೇನೆ.

ಇನ್ನು ಪುಟ 25. ಡಿಮ್ಯಾಂಡ್ ನಂಬರ್ 44. ಇದರಲ್ಲಿ ಒಂದು ವಿಷಯ ಬಹಳ ಆಶ್ಚರ್ಯವನ್ನುಂ ಟು ಮಾಡುತ್ತದೆ. ನಮ್ಮ ದೇಶದಲ್ಲಿರುವ ಎಚ್. ಎಂ. ಟಿ. ಯಲ್ಲಿ ಬೇಕಾದಷ್ಟು ಸುಜಾತ ಮತ್ತು ಜನತಾ ಹೆಸರಿನ ಎಷ್ಟೋ ಗಡಿಯಾರಗಳು ತಯಾರಾಗುತ್ತಿವೆ. ಅದಕ್ಕಾಗಿ ಕೇಂದ್ರ ಸರ್ಕಾರದವರು ಕೋಟಿಕೋಟಿ ರೂಪಾಯಿಗಳನ್ನು ಬಂಡವಾಳ ಹಾಕಿ ಇಲ್ಲಿ ಅಂತಹ ಕಾರ್ಖಾನೆಯನ್ನು ನಡೆಸುತ್ತಿ ದ್ದಾರೆ. ಅಂಥಾದ್ದರಲ್ಲಿ ಅಲ್ಲಿ ಮಾಡದೇ ಇರುವ ಕೆಲಸವನ್ನು ಇವರು ಇಲ್ಲಿ ಮಾಡುವುದೆಂದರೇನು ? ಧಾರವಾಡದಲ್ಲಿ ಅಲಾರಂ ಟೈಂಪೀಸುಗಳನ್ನು ತಯಾರುಮಾಡುವ ಕೆಲಸವನ್ನು ಇವರು ಏತಕ್ಕೆ ಮಾಡು ತ್ತಾರೋ ನನಗಂತೂ ಅರ್ಥವಾಗುತ್ತಿಲ್ಲ. ನಮ್ಮ ಜನ ಇತ್ತೀಚೆಗೆ ಬಹಳವಾಗಿ ಎಚ್ಚತ್ತಿದ್ದಾರೆ. ಯಾವ ಒಂದು ಒಳ್ಳೆಯ ನೀತಿಯಿಂದ ಈ ಕೆಲಸವನ್ನು ಮಾಡಿದ್ದಾರೆ ಎಂದು ಕೇಳಿದರೆ, ಇಲ್ಲವೆಂದು ನಾನು ಹೇಳಬೇಕಾಗಿದೆ. ಆ ಕಂಪೆನಿಯಲ್ಲಿ ಯಾರಾದರೂ ಮೈಸೂರು ದೇಶದ ಇಂಡಸ್ಟ್ರಿಯಲಿಸ್ಟು ಇದ್ದಾರೆಯೇ, ಈ ಸಭಾಸದಸ್ಯರು ಯಾರಾದರೂ ಇದ್ದಾರೆಯೇ, ಅಥವಾ ಮೇಲ್ಮನೆಯ ಸದಸ್ಯರೇ ನಾದರೂ ಇದ್ದಾರೆಯೇ ಎಂಬುದಾಗಿ ನಾನು ಪ್ರಶ್ನೆಮಾಡುತ್ತೇನೆ. ಎಲ್ಲೋ ಕೆಲವರು ಕೈಗಾರಿಕಾ ತಜ್ಞರು ಇರಬಹುದು. ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಈ ಕಂಪೆನಿಯಲ್ಲಿ ತಯಾರಾದ ಗಡಿಯಾರಗಳು ಇಲ್ಲದೇ ಹೋಗಿದ್ದರೆ ಜನರಿಗೆ ಟೈಂ ಗೊತ್ತಾಗುತ್ತಿರಲಿಲ್ಲವೇ ? ಹಳ್ಳಿಗಳಲ್ಲಿ ಬೆಳಗಿನ

ಜಾವದಲ್ಲಿ ಕೋಳಿಗಳು ಕೊ-ಕೊ-ಕೊ-ಕೋ ಎಂದು ಕೂಗಿದಕೂಡಲೆ ಗ್ರಾಮಸ್ಥರು ಆಗ ಇಷ್ಟೇ ಟೈಂ ಎಂದು ಹೇಳಿಬಿಡುತ್ತಾರೆ. ಇಲ್ಲಿನವರ ಹಾಗೆ ಮುಂಜಾನೆ 4 ಘಂಟೆಗೆ ಬೆಡ್ ಕಾಫಿ ತೆಗೆದುಕೊಳ್ಳಬೇಕು, 4 ಘಂಟೆ 5 ನಿಮಿಷಕ್ಕೆ ವಾಕಿಂಗ್ ಹೋಗಬೇಕು ಎಂದು ಗ್ರಾಮಗಳಲ್ಲಿ ಹೇಳುವವರಿಲ್ಲ. ಅಂತಹವರೆಲ್ಲರೂ ದೊಡ್ಡ ದೊಡ್ಡ ಪಟ್ಟಣಗಳಲ್ಲಿ, ಅಂದರೆ, ಧಾರವಾಡ, ಬೆಳಗಾಂ, ಬೆಂಗಳೂರುಗಳಲ್ಲಿರುತ್ತಾರೆ. ಇವರು ಇಂತಹ ಗಡಿಯಾರಗಳನ್ನು ಹಾಕಿಕೊಂಡು ಮೆಕನೈಜ್ಡ್ ಲೈಫ್ ನಡೆಸುವವರು. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರುವವರಿಗೆ ಏನೇನು ಸೌಲಭ್ಯಗಳನ್ನು ಒದಗಿಸಬೇಕು ಎಲ್ಲೆಲ್ಲಿ ಕೆರೆ, ಕಾಲುವೆಗಳನ್ನು ಕಟ್ಟಿಸಬೇಕು, ಯಾರ್ಯಾರಿಗೆ ಒಳ್ಳೆಯ ಗೊಬ್ಬರ, ಒಳ್ಳೆಯ ಬೀಜಗಳನ್ನು ಸರಬರಾಜುಮಾಡಬೇಕು, ಅದಕ್ಕಾಗಿ ಎಷ್ಟು ಹಣ ಖರ್ಚುಮಾಡಬೇಕು ಎಂಬ ವಿಷಯಗಳನ್ನು ಬಿಟ್ಟು ಧಾರವಾಡದಲ್ಲಿರತಕ್ಕ ಗಡಿಯಾರ ಮಾಡತಕ್ಕ ಒಂದು ಕಂಪೆನಿಗೆ ಇಷ್ಟೊಂದು ಹಣ, ಅಂದರೆ, 2 ಲಕ್ಷರೂಪಾಯಿಗಳನ್ನು ಕೊಡುವುದು ಏಕೆ? ಧಾರವಾಡದ ತಿವಾಕ್ ಇಂಡಸ್ಟ್ರೀಸ್ ಲಿಮಿಟೆಡ್ ಅವರಿಗೆ ಸರ್ಕಾರದ ಷೇರು ಕ್ಯಾಪಿಟಲ್ ರೀತ್ಯ 2 ಲಕ್ಷ ರೂಪಾಯಿಗಳನ್ನು ಗಡಿಯಾರಗಳನ್ನು ತಯಾರುಮಾಡಲಿಕ್ಕೆ ಆಡಳಿತ ಪಕ್ಷದವರು ಇನ್‌ವೆಸ್ಟ್ ಮಾಡಿದ್ದಾರೆ. ಇದರಿಂದ ನಿಜವಾಗಿ ಸರ್ಕಾರಕ್ಕೆ ಏನು ಆದಾಯವೂ ಬರುತ್ತಾ ಇಲ್ಲ. ಈ ಕಂಪೆನಿ ಮುಂದೆ ಪಾಪ್ಯುಲರೈಜಾಗಿ ಆದರಿಂದ ಡಿವಿಡೆಂಡ್ ಬರಬೇಕಾದರೆ ಅಷ್ಟುಹೊತ್ತಿಗೆ ಇವರು ಮಂತ್ರಿಗಳಾಗಿರುವುದಿಲ್ಲ, ನಾನೂ ಸಹ ಈ ಸಭೆಯ ಸದಸ್ಯನಾಗಿರುವುದಿಲ್ಲವೋ ಏನೋ ಗೊತ್ತಿಲ್ಲ. ಇಂತಹ ಕಂಪೆನಿಗಳ ಮೇಲೆ ಈ ಕೈಗಾರಿಕೆಗೋಸ್ಕರ ಇಂಥಾ ತುರ್ತು ಪರಿಸ್ಥಿತಿಯಲ್ಲಿ ಇಷ್ಟು ಹಣವನ್ನು ಸರ್ಕಾರದವರು ಹಾಕಕೂಡದು. ಆದ್ದರಿಂದ ನಾನು ಸರ್ಕಾರದವರಲ್ಲಿ ಕೇಳುವುದಿಷ್ಟೆ. ಈಗೇನಾದರೂ ಆ ಕಂಪೆನಿಗೆ 2 ಲಕ್ಷದಲ್ಲಿ ಒಂದು ಲಕ್ಷ ಕೊಟ್ಟು ಇನ್ನೊಂದು ಲಕ್ಷ ಕೊಡದೇ ಇದ್ದ ಪಕ್ಷದಲ್ಲಿ ಅದನ್ನು ಕೂಡಲೇ ನಿಲ್ಲಿಸಿ. ಏಕೆಂದರೆ ಮೊನ್ನೆತಾನೇ ಹಣಕಾಸಿನ ಸಚಿವರು ಮತ್ತು ಮರಾಮತ್ತು ಶಾಖೆಯ ಸಚಿವರು ಎಲ್. ಐ. ಸಿಗೆ ಹೋಗಿ ಕೇವಲ ಅರ್ಧವರ್ಷಕ್ಕೆ ನಾಲ್ಕೈದು ಕೋಟಿ ರೂಪಾಯಿಗಳನ್ನು ಅಲ್ಲಿಂದ ತಂದಿದ್ದಾರೆ. ಇನ್ನೂ 66-67ನೇ ವರ್ಷಕ್ಕೆ ಪುನಃ ಹೋಗಬಹುದು. ಒಟ್ಟಿನಲ್ಲಿ ದೇಶದಲ್ಲಿರತಕ್ಕ ಇಂತಹ ತುರ್ತು ಪರಿಸ್ಥಿತಿಯಲ್ಲಿ ಹೆಚ್ಚಿಗೆ ಆಹಾರೋತ್ಪಾದನೆಯನ್ನು ಮಾಡುವುದಕ್ಕೋಸ್ಕರ ಮತ್ತು ಡಿಫೆನ್ಸ್‌ಗೋಸ್ಕರ ಇಷ್ಟು ಹಣವನ್ನು ವಿನಿಯೋಗಿಸಬೇಕೇ ಹೊರ್ತು ಸುಮ್ಮನೆ ಗ್ರಾಮಾಫೋನ್ ಪ್ಲೇಟುಗಳು ಹಾಗೂ ಗಡಿಯಾರಗಳನ್ನು ತಯಾರು ಮಾಡತಕ್ಕ ಕಂಪೆನಿಗಳಿಗೋಸ್ಕರ ವಿನಿಯೋಗಿಸಕೂಡದು ಎಂದು ನಾನು ಹೇಳುತ್ತೇನೆ. ಈಗಿನ ಸಪ್ಲಿಮೆಂಟರಿ ಡಿಮ್ಯಾಂಡ್ ಮೇಲೆ ಚರ್ಚೆಮಾಡುವ ಕಾಲದಲ್ಲಿ ಇಂತಹ ಒಂದು ಡಿಮ್ಯಾಂಡನ್ನು ತಂದು ಸಭೆಯ ಸಮಯವನ್ನು ದುರುಪಯೋಗಮಾಡಲು ಇವರೇ ಕಾರಣರಾಗಿದ್ದಾರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† Sri G. V. GOWDA (Palya).—Sir, at the outset I regret to mention that the financial position remains as gloomy as ever. The Minister or the Government cannot feel satisfied because of the reported award of the Fourth Finance Commission. But, I must confess that they have given relief to Government to a considerable extent. Something better could have been done at the hands of the Finance Commission.

Yesterday, the Hon'ble Minister is said to have mentioned in the Upper House that the Finance Commission has also recommended for the increased expenditure in respect of the Government employees and other local bodies and it would be to an extent of ten crores of rupees.

[MR. SPEAKER in the Chair]

In this connection, I wish to know whether our Government has demanded the payment of commitment in respect of grant-in-aid they are paying to the Panchayatraj and other institutions. Unless that is done, I fear that it may not be possible.

Mr. SPEAKER.—On what page?

Sri G. V. GOWDA.—I am generalising the financial position—how we have been able to progress. Coming to the particular schedule, as the Hon'ble Speaker rightly pointed out, in Demand No. 5, additional staff

(SRI G. V. GOWDA)

has been appointed in the Commercial Taxes Department and also in the Intelligence section of the Commercial Taxes Department. So far as the intelligence section is concerned, Madras have done wonderful work. I do not know how the intelligence section is working in our State,

MR. SPEAKER.—We have done better.

SRI G. V. GOWDA.—As regard sales-tax, up to the year ending 31st March 1965, there are arrears of 187 lakhs. What steps have Government taken to see that these arrears are collected is not known. They are not paying this money from out of their pockets. Everybody knows that this is the money collected from consumers. They have collected from consumers. They have collected and it is their duty to see that it is paid to the Government. I do not know why steps should not be taken to collect these arrears before the end of the Fourth Plan period.

MR. SPEAKER.—Is the Hon'ble member supporting the Demand or...

SRI G. V. GOWDA.—Supporting and also justifying. The intelligence section ought to see that escaped assessments are made and arrears are collected so that our resources could be augmented.

As regards Demand No. 10, my friend Sri Sivappa and others have stated how it is extravagant at this juncture to incur expenditure on this account.

MR. SPEAKER.—This should have been purchased three years earlier.

SRI G. V. GOWDA.—It must be our utmost consideration to see that the utmost economy is effected and wasteful expenditure is avoided. Such being the case, Government should have thought whether it was desirable to make purchases on spending that huge amount.

So far as the Food Control Orders are concerned, all the orders Government have promulgated did not stand the test of law. You may remember that an order came into existence that whoever possessed 25 quintals of rice and more should declare and that he should be prosecuted if he did not declare. Many prosecutions were launched. The defence that was taken by these people was that ten days having elapsed, they could not be prosecuted. Another order came that within the 10th of every month, the stocks they held should be delcared. Prosecutions were launched. The defence of the persons was that they acquired the property only on the 15th and they were not required under the concerned food order to declare. No control order passed by the Government stood the test of law. Many people who contravened took advantage of the loopholes in the law and are at large.

Demand No. 17—so far as these crash programmes are concerned, I submit that nothing has been done.

MR. SPEAKER.—The best has been done.

SRI G. V. GOWDA.—Several schemes in the agricultural department were made to which cent percent assistance was promised by the Centre. But how far have we effected improvement—whether in poultry, sheep-breeding or fisheries development and potato growing or increase in agricultural production ? In what way have we been able to achieve improvement ? We have been told that the Government of India have been giving full assistance under the crash programmes. The amounts given by the Government of India will not be spent by the close of the financial year, with the result that we have got to have it for the next year. To that extent, we lose. There are several demands which could have been brought correctly in the supplementary estimates and placed before the House in March 1965 itself. The demands now before us could have been brought in the supplementary estimates even in March. Orders passed in January, February and March 1965—those things are now brought before us.

MR. SPEAKER.—This is a radically inconsistent argument. Supplementary demands in March precede the Budget.

SRI G. V. GOWDA.—Budget proposals would be formulated by December of every year. In January Government passes orders for increasing the expenditure.

MR. SPEAKER.—How can there be supplementary demands before the Budget is approved ?

SRI G. V. GOWDA.—They have been brought for sanction in February, March 1965 itself by way of third or fourth instalments. This could have been brought in the supplementary demands. That is my contention.

So far as developing mulberry is concerned, I welcome it provided it gives results. Government is aware that we are incurring loss to the tune of 25 lakhs every year. If Government could improve this and that the loss is reduced, they would have done good service to the Sericulture Industry for its survival in the State. They should take some steps to see that this loss is reduced. I am voicing the opinion of many when I say that the General Silk Board should purchase all the silk produced in the country and sell it at the rate of no loss or profit basis, with the result that no loss is incurred.

MR. SPEAKER.—The State Government may be willing. But it is the Central Government that has to agree.

SRI G. V. GOWDA.—This statutory Board is constituted for the development of the silk industry. If Government are losing 25 lakhs every year there is no use in keeping these Filatures open. They are getting some profit from the imported silk. Both the silk produced in the country and the imported silk as well should be taken over by the Central Silk Board in order to minimise these losses.

3-30 P.M.

So far as the investigation circle for which they have appointed a Chief Engineer is concerned, I want to know what is the work turned

(SRI G. V. GOWDA)

out by this circle. They have not done their work properly and what is the idea of having an additional Chief Engineer ?

In short, it is only those schemes which are in the interest of the people of this State will get the approval of this House and not others.

SOLIDARITY DAY--OBSERVANCE AND TAKING THE PLEDGE.

MR. SPEAKER.—I request the entire House to take the Solidarity Pledge standing, first in Kannada and then in English. The following is the pledge :

" ಹೋರಾಟವು ಎಷ್ಟೇ ದೀರ್ಘವಾದರೂ, ಕಠಿಣವಾದರೂ, ಬಲಿದಾನವು ಹಿರಿದಾದರೂ, ನನ್ನ ಮಾತೃಭೂಮಿಯ ಸ್ವಾತಂತ್ರ್ಯ ಮತ್ತು ಸಮಗ್ರತೆಯನ್ನು ಸಂರಕ್ಷಿಸಬೇಕೆಂಬ ನನ್ನ ದೇಶಬಾಂಧವರ ಪವಿತ್ರ ಸಂಕಲ್ಪವನ್ನು ನಾನಿಂದು ಮತ್ತೆ ಸ್ಥಿರೀಕರಿಸುತ್ತೇನೆ.

ನನ್ನ ರಾಷ್ಟ್ರದ ಶಕ್ತಿ ಮತ್ತು ಸುಭದ್ರತೆಗಾಗಿ ನಿಶ್ಚಲ ನಿರ್ಧಾರದಿಂದ ಶ್ರಮಿಸುವೆನೆಂದು ಪ್ರತಿಜ್ಞೆ ಮಾಡುತ್ತೇನೆ."

" I reaffirm the solemn resolve of our people to preserve the freedom of motherland, however hard and long the struggle, and how ever great the sacrifices.

I pledge to work with determination for the strength and solidarity of the nation."

(All the Members took the Solidarity Pledge standing.)

SUPPLEMENTARY AND ADDITIONAL DEMANDS FOR GRANTS (1ST INSTALMENT), 1965-66.

(Debate continued.)

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಮಾನ್ಯ ಅರ್ಥಸಚಿವರು ತಮ್ಮ ಮೊದಲನೆ ಕಂತಿನ ಸಪ್ಲಿಮೆಂಟರಿ ಡಿಮ್ಯಾಂಡನ್ನು ಸಭೆಯ ಮುಂದಿಟ್ಟಿದ್ದಾರೆ. ಈ ಸಂದರ್ಭದಲ್ಲಿ ಹೊಸದಾಗಿ ಹಣಕಾಸಿನ ಇಲಾಖೆಯನ್ನು ವಹಿಸಿಕೊಂಡಿರತಕ್ಕಂಥ ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ಬಹಳ ದೊಡ್ಡ ಜವಾಬ್ದಾರಿಯನ್ನು ಹೊತ್ತಿದ್ದಾರೆ ಎಂದು ಹೇಳಬೇಕಾಗಿದೆ. ಇಲ್ಲಿ ಬೇಡಿಕೆಗಳ ವಿಷಯವು ಪ್ರಸ್ತಾಪವಾಗುತ್ತಿದ್ದರೂ, ಈ ಬೇಡಿಕೆಗಳನ್ನು ಪ್ರಥಮ ಈ ಸಭೆಯಮುಂದೆ ಮಾನ್ಯ ಸಚಿವರು ಏನು ಮಂಡಿಸುತ್ತಿದ್ದಾರೊ ಆ ಸಂದರ್ಭದಲ್ಲಿ ಹಿಂದೆ ನಾವು ಸಭೆ ಸೇರಿದಾಗ ಮತ್ತು ಈಗ ಸೇರಿದಾಗ ಮಧ್ಯೆ, ಮಂತ್ರಿಮಂಡಲದ ಪೋರ್ಟ್‌ಫೋಲಿಯೋಗಳ ಪುನರ್ ಹಂಚಿಕೆ ನಡೆದಿದೆ. ಅದರ ಬಗ್ಗೆ ಸರಕಾರದವರು ನಮಗೆ ಏನಾದರೂ ಸಮಜಾಯಿಷಿ ಕೊಡುತ್ತಾರೊ ಅಥವಾ ಆ ವಿಷಯ ಮನೆಗೆ ಸಂಬಂಧಪಟ್ಟುದಲ್ಲ, ಅದು ಸರಕಾರಕ್ಕೆ ಸಂಬಂಧಪಟ್ಟ ವಿಷಯ ಎಂದು ಹೇಳುತ್ತಾರೊ ನನಗೆ ಗೊತ್ತಿಲ್ಲ.

ಈ ಸಮಯದಲ್ಲಿ ನಮ್ಮ ರಾಜ್ಯದ ಹಣಕಾಸಿನ ವಿಷಯಗಳನ್ನು ವಿಚಾರ ಮಾಡಿ ಸಲಹೆ ಕೊಡುವುದಕ್ಕಾಗಿ ರಿಸರ್ವ್ ಬ್ಯಾಂಕಿನ ಒಬ್ಬರು ನಿವೃತ್ತ ಅಧಿಕಾರಿಗಳನ್ನು ನೇಮಿಸಿಕೊಂಡಿದ್ದಾರೆ. ಸರಕಾರದವರು ಎಂದು ನಾವು ಕೇಳಿದ್ದೇವೆ. ಆ ವಿಷಯವನ್ನು ಕೂಡ ಮಾನ್ಯ ಸಚಿವರು ಈ ಒಂದು ಅನುದಾನ ಪಟ್ಟಿಯಲ್ಲಿ ತಂದಿಲ್ಲ. ಒಂದು ಮಾತನ್ನು ಹೇಳಬೇಕಾಗಿದೆ : ನಮ್ಮ ರಾಜ್ಯದ ಹಣಕಾಸಿನ

ಪರಿಸ್ಥಿತಿ ತೃಪ್ತಿಕರವಾಗಿಲ್ಲ. ಆ ವಿಷಯವನ್ನು ಪರಿಶೀಲನೆ ಮಾಡುವುದಕ್ಕಾಗಿ ರಾಜ್ಯ ಸರಕಾರದವರು ಹಿಂದೆ ರಿಸೋರ್ಸಸ್ ಮತ್ತು ಎಕಾನಮಿ ಕಮಿಟಿ ಅಂತ ಹೇಳಿ ಏನು ರಚನೆ ಮಾಡಿದ್ದರೊ, ಆ ಸಮಿತಿ ಅನೇಕ ಸಲಹೆಗಳನ್ನು ಸರಕಾರದವರಿಗೆ ಕೊಟ್ಟಿದ್ದು ಅವುಗಳಲ್ಲಿ ಮಂತ್ರಿಮಂಡಲದ ಗಾತ್ರವನ್ನು ಕಿರಿದು ಮಾಡಬೇಕು ಅನ್ನುವ ಸಲಹೆಯನ್ನೂ ಕೊಟ್ಟಿದ್ದರು. ಇಂಥಿಂಥ ಬಾಬುಗಳಲ್ಲಿ ಇನ್ನೂ ಅನೇಕ ಉಳಿತಾಯಗಳನ್ನು ಇಷ್ಟಿಷ್ಟು ಮಾಡಬೇಕು ಮತ್ತು ಕೊರತೆ ಬೀಳತಕ್ಕಂಥ 43 ಕೋಟಿ ರೂಪಾಯಿಗಳನ್ನು ಹೇಗೆ ಭರ್ತಿ ಮಾಡಬೇಕೆಂದು ಹೇಳಿದ್ದಾರೆ.

ಅಧ್ಯಕ್ಷರು.—ಅದನ್ನು ಬಜೆಟ್ ಭಾಷಣದಲ್ಲಿ ಸಂಪೂರ್ಣವಾಗಿ ಹೇಳಿದ್ದೀರಿ.

ಶ್ರೀ ಎಸ್. ಗೋಪಾಲಗೌಡ.—ಸಲಹೆಗಾರರನ್ನು ನೇಮಿಸುವುದು, ಅವರ ವರದಿಗಳನ್ನು, ಸಲಹೆಗಳನ್ನು ಸರಕಾರದವರು ಪಡೆದುಕೊಳ್ಳುವುದು, ನಂತರದಲ್ಲಿ ಅವು ತಮಗೆ ಅನಾನುಕೂಲವೆಂದು ಕಂಡುಬಂದ ಪಕ್ಷದಲ್ಲಿ ಕಾರ್ಯಗತಮಾಡದೆ ಇರುವುದು, ಇದು ಒಳ್ಳೆಯ ಕ್ರಮವಲ್ಲ, ಒಳ್ಳೆಯ ರೀತಿಯಲ್ಲ. ಆದ್ದರಿಂದ ಇವತ್ತಿನ ದಿವಸ ಏನು ಒಬ್ಬ ಸಲಹೆಗಾರರನ್ನು ನೇಮಿಸಿಕೊಂಡಿದ್ದೀರೊ ಅವರಿಂದಲಾದರೂ ಈ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಆಮೂಲಾಗ್ರವಾಗಿ ಆದಷ್ಟು ಬೇಗ ಪರಿಶೀಲನೆ ಮಾಡಿಸಿ, ಒಂದು ಧೈರ್ಯವಾದ ಹೆಜ್ಜೆಯನ್ನು ಸರಕಾರದವರು ಹಣಕಾಸಿನ ವಿಷಯದಲ್ಲಿ ತೆಗೆದುಕೊಳ್ಳುತ್ತಾರೆಂದು ನಾನು ಈ ಸಂದರ್ಭದಲ್ಲಿ ಆಶಿಸುತ್ತೇನೆ.

ಈ ಬೇಡಿಕೆಯಲ್ಲಿ ಮುಖ್ಯವಾಗಿ ಎನ್.ಜಿ.ಓ.ಗಳಿಗೆ ಮಾನ್ಯ ಮಂತ್ರಿಗಳು ಬಂದಮೇಲೆ ಕೆಲವು ಹಣಗಳನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಸರಕಾರಕ್ಕೆ ನಿವೇದಿಸಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಎನ್.ಜಿ.ಓ. ಸಂಘ ಬಹಳ ದಿವಸದಿಂದ ನಡೆದುಕೊಂಡು ಬಂದಿದೆ. ಅದು ಕಾಯಿದೆ ಬದ್ಧವಾಗಿ ನಡೆದುಕೊಂಡು ಬಂದಿದೆ.

MR. SPEAKER.—This does not arise under the Supplementary Demands. I request the Hon'ble Member to confine himself to the Supplementary Demands. ಇದು ಯಾವ ಡಿಮ್ಯಾಂಡಿನಲ್ಲಿ ಬರುತ್ತದೆ ?

ಶ್ರೀ ಎಸ್. ಗೋಪಾಲಗೌಡ.—ಜನರಲ್ ಅಡ್ಮಿನಿಸ್ಟ್ರೇಷನ್ನಿನಲ್ಲಿ 'Other charges for Motor Cars and Carriages' ಅಂತ ಹೇಳಿದ್ದಾರೆ.

ಅಧ್ಯಕ್ಷರು.—ಅಷ್ಟನ್ನು ಮಾತ್ರ ಹಾಕಿದ್ದಾರೆ. ಅದನ್ನು ಒಪ್ಪುತ್ತೇನೆ, ಅಥವಾ ತಿರಸ್ಕರಿಸುತ್ತೇನೆ, ವಿರೋಧಿಸುತ್ತೇನೆ ಎಂದು ಹೇಳಿ.

ಶ್ರೀ ಎಸ್. ಗೋಪಾಲಗೌಡ.—ಇದೂ ಅಡ್ಮಿನಿಸ್ಟ್ರೇಷನ್ನಿಗೆ ಸಂಬಂಧಪಟ್ಟಿದು. ಹೇಗೆಂದರೆ, ಇವತ್ತು ಎನ್.ಜಿ.ಓ. ಸಂಘದ ಅಧ್ಯಕ್ಷರನ್ನು ಕೆಲಸದಿಂದ ತೆಗೆದುಹಾಕಿದರು—ಅವರು ಶಿಸ್ತಿನಿಂದ ನಡೆಯಲಿಲ್ಲವೆಂತ ಹೇಳಿ. ಅವರು ಪುನಃ ಮಂತ್ರಿಗಳಿಗೆ ವಿನಂತಿ ಮಾಡಿಕೊಂಡರು, ಅಪೀಲ್ ಸಲ್ಲಿಸಿದರು.

ಅಧ್ಯಕ್ಷರು.— ಅದು ಇಲ್ಲಿ ಬರುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಒಂದು ವಾಕ್ಯದಲ್ಲಿ ಹೇಳುತ್ತೇನೆ. ಅವರು ಗವರ್ನರಿಗೆ ಅಪೀಲು ಹಾಕಿದರು. ಆದರೆ ಅವರ ಮನವಿಯನ್ನು ಸರಕಾರದವರು ಪರಿಶೀಲನೆ ಮಾಡಲಿಲ್ಲ. ಸರ್ಕಾರ ಯಾವ ಒಂದು ನಿಲುವನ್ನು ಹೊಂದಿದ್ದಾರೊ, ಅದು ಆಡಳಿತದ ಕೆಲಸಕಾರ್ಯಗಳು ತೃಪ್ತಿಕರವಾಗಿ ನಡೆಯುವುದಕ್ಕೆ ಸಹಾಯಕವಾಗಿಲ್ಲ. ಎಲ್ಲಿಯತನಕ ಎನ್.ಜಿ.ಓ.ಗಳು ಅಸಮಾಧಾನವಾಗಿ, ಅತೃಪ್ತಿಯಿಂದ ಇರುತ್ತಾರೊ, ಅಲ್ಲಿಯವರೆಗೆ ಅವರು ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಾರೆಂದು ನಿರೀಕ್ಷಣೆ ಮಾಡುವುದಕ್ಕಾಗುವುದಿಲ್ಲ. ಅವರ ಬೇಡಿಕೆಗಳನ್ನು ಸರಕಾರದವರು ಪುನಃ ಪರಿಶೀಲನೆ ಮಾಡಿ ಅವರಿಗೆ ಒಂದು ರೀತಿಯಲ್ಲಿ ಸಮಾಧಾನವಾಗುವ ರೀತಿಯಲ್ಲಿ ಏನಾದರೂ ತೀರ್ಮಾನಗಳನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಕಾರುಗಳನ್ನು ಕೊಂಡುಕೊಳ್ಳುವಾಗ, ಹಿಂದೆ ಇದ್ದ ಕಾರುಗಳನ್ನು ಮಾರುವುದರ ಬಗ್ಗೆ ಕೆಲವು ವಿಚಾರಗಳನ್ನು ಇಲ್ಲಿ ಹೇಳಬೇಕಾಗಿದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರೇನೋ ಈಚೆಗೆ ನಾನು ನಡೆದುಕೊಂಡು ಓಡಾಡುತ್ತೇನೆಂದು ಹೇಳಿದ್ದಾರೆ. ಆದರೆ ನಮ್ಮ ಹಣಕಾಸಿನ ಸಚಿವರು ಇಲ್ಲಿರುವ ಪಟ್ಟಿಯಲ್ಲಿ ಸುಮಾರು 2.5 ಲಕ್ಷದಷ್ಟು ಹಣ ಸುಮಾರು ಎಂಟು ಹೊಸ ಕಾರುಗಳನ್ನು ಕೊಂಡುಕೊಳ್ಳುವುದಕ್ಕಾಗಿ ಬೇಕೆಂದು ಕೇಳಿದ್ದಾರೆ. ನಾನು ಹೇಳುವುದು, ಸ್ವಲ್ಪ ಈ ವಿಚಾರದಲ್ಲಿ ಸರಕಾರದವರು ಯೋಚನೆ ಮಾಡುವುದೊಳ್ಳೆಯದು. ಕಾರುಗಳು ಬೇಕು, ಒಳ್ಳೆಯ ಕಾರುಗಳು ಇರಬೇಕು, ಅದರ ಬಗ್ಗೆ ನನಗೇನೂ ಅನುಮಾನವಿಲ್ಲ. ಆದರೆ ಇವೊತ್ತು ನಮ್ಮ ಸರಕಾರದವರು ಕಾರುಗಳನ್ನು ದುರಸ್ತಿ ಮಾಡುವ ಬಗೆ ಅವುಗಳನ್ನು

(ಶ್ರೀ ಎಸ್. ಗೋಪಾಲಗೌಡ)

ಚೆನ್ನಾಗಿ ಇಟ್ಟುಕೊಳ್ಳುವ ಬಗ್ಗೆ ಹಳೆಯ ಕಾರುಗಳನ್ನು ಮಾರಾಟ ಮಾಡುವ ಬಗ್ಗೆ ಅನುಸರಿಸತಕ್ಕ ನೀತಿ ಅಷ್ಟು ಸಮಂಜಸವಾಗಿಲ್ಲ. ಅದರಿಂದಾಗಿ ಬಹಳ ನಷ್ಟವಾಗುತ್ತಲಿದೆ. ರಿಪೇರಿಗಳನ್ನು ಮಾಡಿಸುವಾಗ ಲಕ್ಷಗಟ್ಟಲೆ ಹಣ ನಷ್ಟವಾಗುತ್ತಿದೆ. ಇದು ಸರಿಯೇ ಎಂದು ನಾನು ಇಲ್ಲಿ ಕೇಳುತ್ತೇನೆ. ಕಾರುಗಳ ಜೀವ ನಾಲ್ಕೈದು ವರ್ಷಗಳಷ್ಟು ಬರುತ್ತಿದ್ದರೆ ಅದರ ಜೀವವನ್ನು ಒಂದೇ ವರ್ಷದಲ್ಲಿ ತೆಗೆಯಲಾಗುವುದು. ಇದು ಆಗಬಾರದು ಎಂದು ನಾನು ಹೇಳುವುದು. ತಾವೂ ಕೂಡ ಸರಕಾರದ ಆಸ್ತಿ ಎಂದು ಗೊತ್ತಿದ್ದಾಗ್ಯೂ ತಮ್ಮ ಸ್ವಂತ ಆಸ್ತಿಯಾಗಿದ್ದರೆ ಅದನ್ನು ಹೇಗೆ ನೋಡಿಕೊಳ್ಳುತ್ತಿದ್ದರೋ ಅದರಂತೆಯೇ ಸರಕಾರದ ಕಾರುಗಳನ್ನು ಅಷ್ಟೇ ಮುಂಜಾಗರೂಕತೆ ವಹಿಸಿ ಚೆನ್ನಾಗಿ ನೋಡಿಕೊಳ್ಳಬೇಕಾದುದು ಅಗತ್ಯ. ಅವುಗಳ ಮೇಂಟೆನೆನ್ಸ್ ಹಾಗೂ ರಿಪೇರಿಗಳ ಬಗ್ಗೆ ಈಗ ಕೆಲವು ಗೊತ್ತಾದ ಫರ್ಮ್ಸ್‌ಗಳ ಮೂಲಕ ಕೊಡುತ್ತಿರುವುದರಿಂದ ಅವರು ಬಹಳ ಹೆಚ್ಚು ಚಾರ್ಜುಗಳನ್ನು ಹಾಕಿ ರಿಪೇರಿ ಮಾಡುತ್ತಿರುವುದರಿಂದ ಬಹಳ ನಷ್ಟವಾಗುತ್ತಿದೆ. ಇದನ್ನು ಸರಕಾರ ಪರಿಶೀಲನೆ ಮಾಡಿ ಅದಷ್ಟು ಹೆಚ್ಚು ನಷ್ಟವಾಗುವುದನ್ನು ನಿಲ್ಲಿಸಬೇಕೆಂದು ಇಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಆಹಾರ ಇಲಾಖೆ ಹೊಸದಾಗಿ ಅಸ್ತಿತ್ವಕ್ಕೆ ಬಂದಮೇಲೆ ಅನೇಕ ಚೆಕ್ ಪೋಸ್ಟುಗಳು ಬೇಕಾದವು ಎಂದು ಸುಮಾರು 80 ಚೆಕ್ ಪೋಸ್ಟುಗಳು ಹೊಸದಾಗಿ ನಿರ್ಮಾಣವಾಗಿವೆ. ಇದರಲ್ಲಿರುವ ಡಿಮ್ಯಾಂಡು 13 ರಲ್ಲಿ ಹೇಳಿರುವಂತೆ ಸುಮಾರು 12 ವಿಲ್ಲೀಸ್ ಜೀಪುಗಳನ್ನು ಕೊಂಡುಕೊಳ್ಳುವುದಕ್ಕಾಗಿ 1.92 ಲಕ್ಷ ಹಣ ಬೇಕಾಗಿದೆ ಎಂದು ಇದೆ. ಒಂದು ಮಾತನ್ನು ಸಾಮಾನ್ಯವಾಗಿ ಇಲ್ಲಿ ಟೀಕೆ ಎಂದು ಹೇಳಬಹುದು. ನಮ್ಮ ಸರ್ಕಾರದವರು ಯೋಜನೆಯ ಈ ಒಂದು ಅವಧಿಯಲ್ಲಿ ಹೊಸ ಹೊಸ ಇಲಾಖೆಗಳನ್ನು ಹೊಸ ಹೊಸ ಡಿವಿಜನ್ನುಗಳನ್ನು ನಿರ್ಮಾಣ ಮಾಡತಕ್ಕದ್ದು ಒಂದು ಅಭ್ಯಾಸವಾಗಿ ಹೋಗಿಬಿಟ್ಟಿದೆ. ಈ ಹದಿನೈದು ವರ್ಷಗಳಲ್ಲಿ ಏನಾದರೂ ಒಂದು ಹೊಸ ಕೆಲಸ ಮಾಡಬೇಕು ಎಂದರೆ, ಅದಕ್ಕೆ ಮೊದಲಿಂದ ತಗಲತಕ್ಕ ಹೊಸ ಸಿಬ್ಬಂದಿಗಳನ್ನು ನಿಯಮಿಸತಕ್ಕದ್ದು ಒಂದು ನಿಯಮವಾಗಿ ಬರುತ್ತಿದೆ. ಇದನ್ನು ಸ್ವಲ್ಪ ವಿಚಾರ ಮಾಡಬೇಕು. ಇದರ ಜೊತೆಗೆ ನಮ್ಮ ರಾಜ್ಯ ಕೂಡ ಒಂದು ಡೆಫಿಸಿಟ್ ಸ್ಟೇಟು ಎಂದು ನಾವೂ ತಿಳಿದುಕೊಂಡಿದ್ದೇವೆ. ನಮ್ಮ ರಾಜ್ಯದಲ್ಲಿ, ಮಾನ್ಯ ಸದಸ್ಯರಾದ ಶ್ರೀಮಾನ್ ವಿ. ಎಸ್. ಪಾಟೀಲ್‌ರವರು ಹೇಳಿದ ಹಾಗೆ, ಚಿಂಚೋಳಿಯ ರಸ್ತೆಯಲ್ಲಿ ಹಾಗೂ ಇನ್ನೊಂದು ರಸ್ತೆಯಲ್ಲಿ ದಿನವೂ ಕನಿಷ್ಟ 10 ಲಾರಿ ಲೋಡುಗಳಷ್ಟು ದವಸ ತುಂಬಿದ ಲಾರಿಗಳು ಹೋಗುತ್ತಿವೆ, ಬೇಕಾದರೆ ತೋರಿಸುತ್ತೇನೆ ಎಂದೂ ಅವರು ಹೇಳಿದರು. ಇದರ ಬಗ್ಗೆ ಅವರು ಚಾಲೆಂಜು ಕೂಡ ಮಾಡಿದರು. ಇದಕ್ಕಾಗಿ ಸ್ಕ್ಯಾಡುಗಳು ಹಾಗೂ ಇನ್ನಿತರ ಸಿಬ್ಬಂದಿಗಳನ್ನು ಇಟ್ಟು ಅದಕ್ಕಾಗಿ ಬೇಕಾದಷ್ಟು ಖರ್ಚು ಮಾಡಿ ಕದ್ದು ಹೋಗುವ ಆಹಾರ ಧಾನ್ಯಗಳನ್ನು ತಡೆಗಟ್ಟಲು ಇಷ್ಟೊಂದು ಸಿಬ್ಬಂದಿಗಳು ಇದ್ದಾಗ್ಯೂ, ಇವೊತ್ತು ಮಹಾರಾಷ್ಟ್ರದ ಕಡೆಗೆ ಹಾಗೂ ಕೇರಳದ ಕಡೆಗೆ ಹೋಗುತ್ತಿರುವುದನ್ನು ತಡೆಗಟ್ಟುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಲಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇಷ್ಟು ಹೆಚ್ಚಾಗಿ ಹಣವನ್ನು ಖರ್ಚು ಮಾಡುವಾಗ ಜನತೆ ಸರಕಾರದ ಇಲಾಖೆಯಿಂದ ತೃಪ್ತಿಕರವಾದ ಸೇವೆಯನ್ನು ನಿರೀಕ್ಷಿಸಬೇಕಾಗುತ್ತದೆ.

ಇಲ್ಲಿ ಒಂದು ವಿಷಯದಲ್ಲಿ ನಾನು ಸರಕಾರಕ್ಕೆ ನನ್ನ ಧನ್ಯವಾದವನ್ನು ಅರ್ಪಿಸಬೇಕಾಗಿದೆ. ಏತಕ್ಕಾಗಿ ನಾನು ಧನ್ಯವಾದವನ್ನು ಅರ್ಪಿಸುತ್ತೇನೆ ಎಂದು ತಾವು ಆಶ್ಚರ್ಯಪಡಬಹುದು. ಅದರಲ್ಲೂ ನನಗೆ ವೈಯಕ್ತಿಕವಾಗಿ ಮಲೆನಾಡಿನಿಂದ ನಾನು ಬಂದಿರುವುದರಿಂದ ಮತ್ತು ಮಲೆನಾಡಿನಲ್ಲೇ ಹುಟ್ಟಿ ಬೆಳೆದಂತಹ ಮತ್ತು ಇವೊತ್ತು ರಾಷ್ಟ್ರದಲ್ಲಿ ಒಂದು ಗೌರವವನ್ನು ಪಡೆದಿರತಕ್ಕಂತಹ ಡಾ. ಕೆ. ವಿ. ಪುಟ್ಟಪ್ಪನವರಿಗೆ ಅವರ ಸಾಹಿತ್ಯ, ಅವರ ಕವನ ಹಾಗೂ ಕಾವ್ಯಗಳ ಪ್ರತಿಭೆಗೋಸ್ಕರ ಸರಕಾರದವರು ಅವರಿಗೆ ಅಜೀವಪರ್ಯಂತ 500 ರೂಪಾಯಿಗಳಷ್ಟು ಮಾಸಾಶನವನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಈ ತೀರ್ಮಾನ ಬಹುಸ್ತುತ್ಯಾರ್ಹವಾದುದು. ಹೀಗೇ ಈ ರಾಜ್ಯದಲ್ಲಿ ಬೇರೆ ಅನೇಕ ಕವಿಗಳು ಹಾಗೂ ಸಾಹಿತಿಗಳು ಮತ್ತು ಕಲಾವಿದರು ಏನಿದ್ದಾರೋ ಅವರುಗಳಿಗೂ ಕೂಡ ಸಕಾಲದಲ್ಲಿ ಯಥೋಚಿತವಾಗಿ ಗೌರವಿಸತಕ್ಕದ್ದು ಬಹಳ ಅಗತ್ಯ ಎಂದು ಇಲ್ಲಿ ಸರಕಾರಕ್ಕೆ ಒಂದು ಮಾತು ಹೇಳುತ್ತೇನೆ.

ಯೋಜನೆಗಳ ವಿಷಯದಲ್ಲಿ ಒಂದು ಮಾತನ್ನು ಇಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಸಾಮಾನ್ಯವಾಗಿ ಯೋಜನಾಬದ್ಧವಾಗಿ ಕಾರ್ಯಕ್ರಮಗಳನ್ನು ಹಾಕಿಕೊಂಡು ನಾವು ಮುಂದುವರಿಯುತ್ತಿದ್ದೇವೆ. ಆದರೆ ನಾವು ನೋಡುತ್ತಿರುವಂತೆ ಕೇಂದ್ರ ಸರಕಾರದವರು ಇಂತಹ ಕೆಲವು ಯೋಜನೆಗಳಿಗಾಗಿ ಎಂದು ಹಣವನ್ನು ಮಂಜೂರು ಮಾಡಿಬಿಡುತ್ತಾರೆ. ಆ ಸಮಯ

ದಲ್ಲಿ ನಾವು ಮ್ಯಾಚಿಂಗ್ ಗ್ರ್ಯಾಂಟು ಎಂದು ಅದಕ್ಕೆ ತಕ್ಕಂತೆ ಕೊಡಬೇಕಾಗುತ್ತದೆ. ಇದಕ್ಕೆ ಸರಕಾರದವರಲ್ಲಿ ನಾನು ಹೇಳುವುದು, ಬಡ್ಜೆಟ್ಟು ಮಾಡುವಾಗಲೇ ಸರಕಾರದವರಿಗೆ ಇಂತಹ ಯೋಜನೆಗಳಿಗೆ ಕೇಂದ್ರದಿಂದ ನೆರವು ದೊರೆಯುತ್ತದೆ ಎನ್ನುವುದೂ ಗೊತ್ತಿರುತ್ತದೆ. ಮತ್ತು ಅದಕ್ಕಾಗಿ ಹಣವನ್ನೂ ಕೊಡಬೇಕು ಎನ್ನುವುದೂ ತಿಳಿದಿರುತ್ತದೆ. ಉದಾಹರಣೆಯಾಗಿ ಹೇಳಬೇಕಾದರೆ, ನಮ್ಮ ಅನಿಮಲ್ ಹಸ್‌ಬೆಂಡ್ರಿ ಇಲಾಖೆಯಲ್ಲಿ ಒಂದು ಕ್ರಾಷ್ ಪ್ರೋಗ್ರಾಂ ಎಂದು ಮಾಡಿ ಎಲ್ಲ ಕಡೆಗಳಲ್ಲಿರುವ ಹಳ್ಳಿಗಳಿಗೂ ಅನ್ವಯವಾಗುವಂತೆ ಇದನ್ನು ಪ್ರಾರಂಭ ಮಾಡಿದ್ದಾರೆ. ಆದರೆ ಇದಕ್ಕಾಗುವ ಸಿಬ್ಬಂದಿಗಳನ್ನೆಲ್ಲಾ ಸಂಬಂಧಪಟ್ಟ ಇಲಾಖೆಯವರು ಪೂರ್ವಭಾವಿಯಾಗಿ ಏಕೆ ಮಾಡಿಕೊಳ್ಳಬಾರದು ! ಇದನ್ನು ಸರಕಾರದವರು ಮನಗಾಣಬೇಕು. ಸ್ಯಾಂಕ್ಷನ್ ಯಾವ ಯಾವುದಕ್ಕೆ ಮೊದಲು ಬರುತ್ತದೆ ಎನ್ನುವುದು ಸರಕಾರಕ್ಕೆ ಗೊತ್ತಿರುತ್ತದೆ ಅಂತಹ ಕೆಲಸಗಳ ಯೋಜನೆಗೆ ಬೇಕಾದ ಸಿಬ್ಬಂದಿ ಹಾಗೂ ಇನ್ನಿತರ ಸಲಕರಣೆಗಳೆಲ್ಲವನ್ನೂ ಮೊದಲೇ ಮಾಡಲು ನಮ್ಮ ಫೈನಾನ್ಸ್ ಮಿನಿಸ್ಟರು ತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳುವುದು ಯುಕ್ತವಾಗಿರುತ್ತದೆ. ಇದಕ್ಕಾಗಿ ಸ್ಯಾಂಕ್ಷನ್ನು ಬಂದ ಮೇಲೆ ಹೊಸದಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕಿಂತ ಮೊದಲೇ ಅದಕ್ಕೆ ಬೇಕಾದ ಕ್ರಮಗಳನ್ನು ಸಿದ್ಧ ಮಾಡುವುದು ಬಹಳ ಯೋಗ್ಯವಾದುದು. ಇದರ ನೀತಿ ಈಗ ನೋಡಿದರೆ ಸರಕಾರದವರು ಬರೀ ನಿದ್ದೆ ಮಾಡುತ್ತಿದ್ದಾರೆ ಎನ್ನುವುದು ನಮಗೆ ಗೊತ್ತಾಗುತ್ತದೆ. ಇದರಲ್ಲಿರುವ ಪಟ್ಟಿಯಲ್ಲಿ ಅಗ್ರಿಕಲ್ಚರು ಎಂದು ಹೇಳಿರುವ ಐಟಂ 1, 2, 3, 4, 5, 6, 7, ಇವೆಲ್ಲಾ ಹೊಸದಾಗಿ ಎಂದೂ ಬಂದದ್ದಲ್ಲ. ಇದಕ್ಕೆಲ್ಲಾ ಸರಕಾರದವರು ಮೊದಲೇ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಲು ಸಾಧ್ಯ. ಅದರಂತೆ ಸರಕಾರ ಮಾಡಲು ಸಿದ್ಧವಾಗಿರಬೇಕು ಎಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು, ಪುಟ 21 ರಲ್ಲಿ ಡಿಮ್ಯಾಂಡು 31 ರಲ್ಲಿ ಐಟಂ (3) ರಲ್ಲಿ ಚೀಫ್ ಇಂಜನೀಯರ್‌ರವರಿಗೇ ಎಲ್ಲ ಕೆಲಸಗಳನ್ನೂ ಮಾಡಲು ಅವರಿಗೆ ಅನುಮತಿ ಕೊಡಲಾಗಿದೆ ಎಂದು ಹೇಳಿದ್ದಾರೆ.

ಸ್ವಾಮಿ,............

ಅಧ್ಯಕ್ಷರು.—ಇಲ್ಲಿ ಸ್ಯಾಂಕ್ಷನ್ ಬರುವವರೆಗೂ ಕಾಯಕೂಡದು ಎಂದು ಹಾಗೆ ಮಾಡಿದಾರೆ.

ಶ್ರೀ ಎಸ್. ಗೋಪಾಲಗೌಡ.—ಇದನ್ನೆಲ್ಲಾ ನೋಡಿದರೆ ನಮಗೆ ಆಶ್ಚರ್ಯವಾಗುತ್ತಿದೆ; ನಾವು ಇನ್ನೂ ಯಾವಾಗ ಎಚ್ಚೆತ್ತುಕೊಳ್ಳುತ್ತೇವೆ ಎಂದು. ದಿನ ಬೆಳಗಾದರೆ ಇಲ್ಲಿ ಇವರು ಆ ಕಾವೇರಿ ಡೆಲ್ಟದಲ್ಲಿರತಕ್ಕ ಪ್ರಾಜೆಕ್ಟ್‌ಗಳನ್ನು, ಕಾಳೀ ನದಿ ಪ್ರಾಜೆಕ್ಟನ್ನು ಬಾರಾಪೋಲೆ ಪ್ರಾಜೆಕ್ಟನ್ನು ಎಲ್ಲಾ ಸಿದ್ಧಮಾಡಿಟ್ಟಿದ್ದೇವೆ, ಇನ್ನೇನು ಅವು ಮಂಜೂರಾಗೇಬಿಡುತ್ತೇವೇನೋ ಅನ್ನುವಂತೆ ಹೇಳುತ್ತ ಇರುತ್ತಾರೆ. ಅವರು ಹೇಳತಕ್ಕದ್ದೇನು, ಟೆಕ್ನಿಕಲ್ ಸ್ಯಾಂಕ್ಷನ್ ಆಗಿದೆಯೇ ಇಲ್ಲವೇ ಎಂಬುದು ಒಂದೂ ಗೊತ್ತಾಗುವುದಿಲ್ಲ. ನಮ್ಮಲ್ಲಿ ಈ ಪ್ರಾಜೆಕ್ಟ್‌ಗಳ ವಿಚಾರ ಹೀಗೆ ಮಾತಿನಲ್ಲಿ ಮುಗಿಯುತ್ತಿದ್ದರೆ ಇಂಡಿಯಾ ದೇಶದ ಇನ್ನಿತರೇ ಭಾಗಗಳಲ್ಲಿ ಅಂದರೆ, ಪಂಜಾಬ್ ಇತ್ಯಾದಿ ಕಡೆಗಳಲ್ಲಿ ಅವರು ಒಂದು ಯೋಜನೆಯನ್ನು ಸಿದ್ಧಗೊಳಿಸಿದ್ದಾರೆಂದರೆ, ಅದನ್ನು ಕೇಂದ್ರದವರ ಮುಂದಿಟ್ಟು ಅದರ ಬಗ್ಗೆ ಕೇಂದ್ರ ಸರ್ಕಾರದವರಿಂದ ಏನೇನು ಹಣ ಅದಕ್ಕೆ ಗ್ರ್ಯಾಂಟ್ ರೂಪದಲ್ಲಿ, ಇಲ್ಲವೇ ಸಾಲದ ರೂಪದಲ್ಲಿ ಅಥವಾ ಇನ್ನಾವುದಾದರೂ ರೂಪದಲ್ಲಿ ಹಣ ಬರುವುದಕ್ಕೆ ಸಿದ್ಧ ಮಾಡಿಟ್ಟುಕೊಂಡು ಅವರ ಯೋಜನೆಗಳನ್ನು ಮುಂದುವರಿಸುತ್ತಿದ್ದರೆ, ಇಲ್ಲಿ ನಮ್ಮವರು ದೆಹಲಿಗೆ ಹೋದರು—ವಾಪಸ್ಸು ಬಂದರು, ಎಂದರೆ ಯೋಜನೆಗಳು ಮಂಜೂರಾದಹಾಗೆ ಆಯಿತೇನು ? ಇವರು ನಮಗೆ ಇಲ್ಲಿ ನಮಗೆ ಇಲ್ಲ ಸಭೆಯಲ್ಲಿ ಅಷ್ಟು ಟಿ.ಎಂ.ಸಿ.ಎಫ್.ಟಿ. ಇಷ್ಟು ಸ್ಪೈಕಲ್ ಎಂತ ಹೇಳಿದ್ದೂ ಹೇಳಿದ್ದೇ. ಹಾಗೊಂದು ವೇಳೆ ಇವರಿಗೆ ವಿಚಾರಗಳು ಕೂಲಂಕಷವಾಗಿ ತಿಳಿಯುವಿದ್ದರೆ ಇಲಾಖೆಯ ಮುಖ್ಯಾಧಿಕಾರಿಗಳನ್ನು ಜೊತೆಯಲ್ಲೇ ದೆಹಲಿಗೆ ಕರೆದುಕೊಂಡು ಹೋಗಿ ತಮ್ಮ ಯೋಜನೆಗಳ ಬಗ್ಗೆ ಎಲ್ಲವನ್ನೂ ಖಚಿತಮಾಡಿಕೊಂಡು, ಕರಾರುವಾಕಾಗಿ ತಿಳಿಸಿ ಅವುಗಳಿಗೆ ಮಂಜೂರಾತಿಯನ್ನು ಪಡೆಯದೆ ಇಲ್ಲಿ ಸುಮ್ಮನೆ ಎಲ್ಲ ಸಿದ್ಧವಾಗಿದೆ ಎಂದರೇನು ಅದರ ಅರ್ಥ ? ನಾವು ಇವರು ಹೇಳತಕ್ಕದ್ದನ್ನು ಹುಡುಕಿಸಿ ನೋಡಿದರೆ ಯಾವುದೂ ಸಿದ್ಧವಾಗಿಲ್ಲ ಎಂದು ಹೇಳಬಹುದು. ಇಲ್ಲಿಯವರೆಗೂ ಸರ್ಕಾರದವರು ಎಲ್ಲಾ ಪ್ರಾಜೆಕ್ಟುಗಳೂ ಸಿದ್ಧವಾಗಿರುತ್ತವೆಂದು ಹೇಳುತ್ತಿದ್ದು ಈಗ ಈ ಬಾಬಿಗೆ ಹೊಸದೊಂದು ಇಲಾಖೆಯನ್ನು ಮಾಡಲಾಗಿದೆ ಎಂದು ಹೇಳತಕ್ಕದ್ದರ ಗುಟ್ಟೇನು ? ನಮ್ಮಲ್ಲಿ ಇಷ್ಟೊಂದು ಇಲಾಖೆಗಳಿದ್ದರೂ ಇರಿಗೇಷನ್ ಪ್ರಾಜೆಕ್ಟ್‌ಗಳ ಬಗ್ಗೆ ಹೊಸದೊಂದು ಇಲಾಖೆಯನ್ನು ಮಾಡಿರುವುದರ ಗುಟ್ಟು, ಹಿಂದಿನ ಇಲಾಖೆಯವರು ಇಲ್ಲಿಯವರೆಗೂ ತಾವು ಮಾಡಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದ ವಿಚಾರವನ್ನು ಈ ದಿವಸ ಮತ್ತೊಬ್ಬರ ಮೇಲೆ ಹೇರುವುದಕ್ಕಾಗಿ ಮಾಡಿರತಕ್ಕ ಕೆಲಸವೆಂದು ಕಾಣುತ್ತಿದೆ. ಹೀಗೆ ಇಲಾಖೆಯವರು ತಮ್ಮ ಜವಾಬ್ದಾರಿಯನ್ನು ಹಾರಿಸಿಕೊಳ್ಳುತ್ತ ಹೋದರೆ ಇದು ಕೊನೆ ಮುಟ್ಟುವುದು ಯಾವ ಕಾಲಕ್ಕೆ ? ಆದ್ದರಿಂದ ಹೀಗೆ ಮಾಡತಕ್ಕದ್ದು ಸರಿಯಲ್ಲವೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಸ್ವಾಮಿ, ಅಧ್ಯಕ್ಷರೇ, ಮಾನ್ಯ ಸದಸ್ಯರು ಸಪ್ಲಿಮೆಂಟರಿ ಎಸ್ಟಿಮೇಟಿನ ಮೇಲೆ ಮಾಡಿದಂಥ ಭಾಷಣಗಳನ್ನೂ ಮತ್ತು ಸೂಚನೆಗಳನ್ನೂ ನಾನು ಗಮನವಿಟ್ಟು ಕೇಳಿದ್ದೇನೆ. ಆದರೆ ನಾನು ಈ ಸಂದರ್ಭದಲ್ಲಿ ಬಹಳ ವಿಷಾದದಿಂದ ಒಂದು ಮಾತನ್ನು ಹೇಳಬೇಕಾಗಿದೆ. ಅದೇನೆಂದರೆ—ಈವರೆಗೂ ನಡೆದಿರತಕ್ಕ ಚರ್ಚೆಯಲ್ಲಿ ಕೆಲವು ಟೀಕೆಗಳೇನಿವೆ ಅವುಗಳನ್ನು ಮಾಡುವುದಕ್ಕೆ ಮುಂಚೆ ಮಾನ್ಯ ಸದಸ್ಯರುಗಳು ಸರಿಯಾದ ಇನ್‌ಫರ್‌ಮೇಷನ್ ತಿಳಿದುಕೊಂಡು ಹಾಗೆ ಟೀಕೆ ಮಾಡಿದ್ದರೆ ಬಹುಶಃ ಅವರು ಮಾಡಿರತಕ್ಕ ಅನೇಕ ಟೀಕೆಗಳಿಗೆ ಅವಕಾಶವಿರುತ್ತಿರಲಿಲ್ಲ, ಆದುದರಿಂದ ಅಂಥ ಟೀಕೆಗಳು ಅನವಶ್ಯಕವಾದವುಗಳೆಂದು ನಾನು ತಿಳಿಸಲಿಚ್ಛಿಸುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಈ ಫೈನಾನ್‌ಷಿಯಲ್ ಅಡ್ವೈಜರ ವಿಚಾರದಲ್ಲಿ ಅವರು ಟೀಕೆ ಮಾಡತಕ್ಕ ಅವಕಾಶವೇ ಇಲ್ಲ. ಆ ಫೈನಾನ್‌ಷಿಯಲ್ ಅಡ್ವೈಜರ ನೇಮಕಕ್ಕೂ ಮತ್ತು ಈ ದಿವಸ ಅದರ ಮೇಲೆ ಮಾಡಿರತಕ್ಕ ಟೀಕೆಗೂ ಈಗ ಸಭೆಯ ಮುಂದಿರತಕ್ಕ ಸಪ್ಲಿಮೆಂಟರಿ ಎಸ್ಟಿಮೇಟಿಗೂ ಯಾವ ಸಂಬಂಧವೂ ಇರುವುದಿಲ್ಲ. ಆ ಟೀಕೆ ಮಾಡಲೇಬೇಕೆಂಬ ಇರಾದೆ ಇದ್ದಿದ್ದರೆ ಅದಕ್ಕೆ ಅವಕಾಶ ಬೇರೆ ಇತ್ತು. ಆದರೆ ಇಂಥ ಒಬ್ಬ ಸಲಹೆಗಾರರ ಅಗತ್ಯವಿತ್ತೋ, ಇರಲಿಲ್ಲವೋ ಎಂಬುದಾಗಿ ಕೆಲವರು ಒಂದು ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ಹಿಂದೆ ಸರ್ಕಾರದವರು ಎಕಾನಮಿ ಅಂಡ್ ರಿಸೋರ್ಸಸ್ ಸಮಿತಿ ಎಂಬುದಾಗಿ ಒಂದು ಸಮಿತಿಯನ್ನು ನೇಮಕ ಮಾಡಿದರು. ಆ ಸಮಿತಿಯು ಕೆಲವು ಶಿಫಾರಸುಗಳನ್ನು ಮಾಡಿತ್ತು. ಆ ಪೈಕಿ ಅನೇಕ ಶಿಫಾರಸುಗಳನ್ನು ಸರ್ಕಾರದವರು ಕೇವಲ ಸ್ವೀಕಾರಮಾಡಿದ್ದೊಂದೇ ಅಲ್ಲ ಅವುಗಳನ್ನು ಜಾರಿಯಲ್ಲೂ ಕೂಡ ತಂದಿದ್ದಾರೆ. ಆದರೆ ಇಂದು ಮೈಸೂರು ಸರ್ಕಾರದ ಹಣಕಾಸಿನ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಬಿಕ್ಕಟ್ಟಿನ ಸಂದರ್ಭದಲ್ಲಿದ್ದುದರಿಂದ, ಈ ವಿಚಾರದಲ್ಲಿ ಸರ್ಕಾರಕ್ಕೆ ಒಬ್ಬ ತಜ್ಞರ ಹಾಗೂ ಒಳ್ಳೆಯ ಅನುಭವಸ್ಥರ ಸಲಹೆ ನಮಗೆ ಈ ಸನ್ನಿವೇಶದಲ್ಲಿ ಬಹಳ ಮಟ್ಟಿಗೆ ಉತ್ತಮವಾಗಬಹುದೆಂದು ಒಬ್ಬರನ್ನು ನೇಮಕ ಮಾಡಿಕೊಳ್ಳಲಾಗಿದೆ. ಇದರಿಂದ ಸರ್ಕಾರಕ್ಕೆ ಸ್ವಲ್ಪ ಮಟ್ಟಿಗೆ ಖರ್ಚು ಬರಬಹುದು. ಆದರೆ ನಮಗೆ ಅವರು ಕೊಡತಕ್ಕ ಸಲಹೆಯಿಂದ ಲಕ್ಷಾಂತರ ರೂಪಾಯಿಗಳ ಉಳಿತಾಯ ಕೂಡ ಆಗಬಹುದು. ಆದ್ದರಿಂದ ನಮಗೆ ಇದರಿಂದ ಖರ್ಚಾಗುವುದಕ್ಕಿಂತ ಹೆಚ್ಚಿನ ಉಳಿತಾಯವಿರುವುದರಿಂದ ಇದನ್ನು ಮಾಡಲಾಗಿದೆ. ರಾಜ್ಯದ ಹಿತದೃಷ್ಟಿಯಿಂದ ಇದನ್ನು ಮಾಡಲಾಗಿದೆ.

ಸ್ವಾಮಿ, ಹಣಕಾಸಿನ ವಿಚಾರದಲ್ಲಿ ಕಮಿಷನ್‌ನವರು ಮಾಡತಕ್ಕ ಸಲಹೆಗೂ ಮತ್ತು ಒಬ್ಬ ಫೈನಾನ್‌ಷಿಯಲ್ ಅಡ್ವೈಜರು ಮಾಡತಕ್ಕ ಸಲಹೆಗೂ ಬಹಳ ವ್ಯತ್ಯಾಸವಿದೆ. ಕೇಂದ್ರ ಸರ್ಕಾರದವರ ಕೈಲಿ ಅನೇಕ ಬಾಬುಗಳಿರುತ್ತವೆ, ಅವರಿಗೆ ಅನೇಕ ವಿಧವಾದ ಸಲಹೆಗಳ ಅಗತ್ಯವಿರುವುದರಿಂದ ಅವರು ಅವರನ್ನು ನೇಮಕ ಮಾಡಿಕೊಂಡಿರಬಹುದು. ಆದುದರಿಂದ ಈ ಅಡ್ವೈಜರ ನೇಮಕ ಅನವಶ್ಯಕ ಎಂಬುದನ್ನು ನಾನು ಒಪ್ಪುವುದಿಲ್ಲ. ಇನ್ನು ಮಂತ್ರಿಗಳ ಕಾರಿಗಾಗಿ ನಾವು 8 ಲಕ್ಷ ರೂಪಾಯಿಗಳನ್ನು ಕೇಳಿದ್ದೇವೆ. ಇದರ ಬಗ್ಗೆ ತುಂಬಾ ಟೀಕೆ ನಡೆದಿದೆ. ಬಹುಶಃ ಸದಸ್ಯರುಗಳು ಈ ಆರ್ಜಿಯನ್ನು ನಾವು ಯಾವ ತಿಂಗಳಲ್ಲಿ ಹೊರಡಿಸಿದ್ದೇವೆಂಬುದನ್ನು ತಿಳಿದಿದ್ದರೆ ಅವರು ಹೀಗೆ ಮಾತನಾಡಲಿಕ್ಕೆ ಅವಕಾಶವಾಗುತ್ತಿರಲಿಲ್ಲ ಎಂದು ನಾನು ಭಾವಿಸುತ್ತೇನೆ.

Mr. SPEAKER.—Buying new cars would have cost more.

ಶ್ರೀ ರಾಮಕೃಷ್ಣ ಹೆಗ್ಗಡೆ.—ಈಗ ಸರ್ಕಾರದವರ ವಶದಲ್ಲಿರತಕ್ಕ ಅನೇಕ ಕಾರುಗಳು ಬಹಳ ಹಳೆಯವು. ಅವುಗಳಿಗೆ ರಿಪೇರಿಗೆ ಆಗತಕ್ಕ ಖರ್ಚು ವಿಪರೀತವಾಗುತ್ತಿದೆ. ಅವುಗಳನ್ನು ಮೈನ್‌ಟೇನ್ ಮಾಡುವುದು ಬಹಳ ಕಷ್ಟ. ಆದರೆ ನಾವು ಆ ಕಾರುಗಳಿಗೆ ಆರ್ಡರನ್ನು ಕೊಟ್ಟನಂತರ ದೇಶದಲ್ಲಿ ಒಂದು ಹೊಸ ಪರಿಸ್ಥಿತಿ ಉದ್ಭವವಾದ ಮೇಲೆ ನಾವು ಆ ಆರ್ಡರುಗಳನ್ನು ಮನ್ನ ಮಾಡಬೇಕೆ, ಅಥವಾ ಅವುಗಳನ್ನು ಬೇರೆ ಯಾರಿಗಾದರೂ ಮಾರಬೇಕೇ, ಅಥವಾ ಅವುಗಳು ನಮಗೆ ಅಲಾಟ್ ಆಗಿದ್ದರೂ ಅವುಗಳನ್ನು ತೆಗೆದುಕೊಳ್ಳಬೇಕೇ ಬೇಡವೇ ಎಂಬುದನ್ನು ಸರ್ಕಾರ ಆಲೋಚನೆ ಮಾಡುತ್ತಿದೆ. ಆದರೆ ನಾವು ಅತಿ ಕಡಮೆ ವೆಚ್ಚದಲ್ಲಿ ಹೆಚ್ಚು ಲಾಭದಾಯಕವಾದ ಕೆಲಸಗಳನ್ನು ಮಾಡಬೇಕೆಂಬ ಉದ್ದೇಶ ನಮಗಿದೆ.

ಇನ್ನು ಶ್ರೀಮಾನ್ ಗೋಪಾಲಗೌಡರು ಎನ್.ಜಿ.ಒ.ಗಳ ವಿಚಾರವಾಗಿ ಕೆಲವು ಮಾತುಗಳನ್ನಾಡಿದ್ದಾರೆ. ಆದರೆ ಅದಕ್ಕೂ ಈಗ ಸಭೆಯ ಮುಂದಿರತಕ್ಕ ವಿಚಾರಕ್ಕೂ ಯಾವ ಸಂಬಂಧವೂ ಇಲ್ಲ; ಅವರು ವಿಚಾರವನ್ನೆತ್ತಿರುವುದರಿಂದ ನಾನು ಈ ಬಗ್ಗೆ ಕೆಲವು ಮಾತುಗಳನ್ನಾಡಬೇಕಾಗಿದೆ. ಕಳೆದ ಆರು ತಿಂಗಳಲ್ಲಿ ಅಂದರೆ ಈ ವರ್ಷದ ಏಪ್ರಿಲ್ ತಿಂಗಳಿಂದೀಚೆಗೆ ನಾವು ಈ ನೌಕರರಿಗೆ ಎರಡು ಸಾರ್ತಿ ತುಟ್ಟಿ ಭತ್ಯವನ್ನು ಹೆಚ್ಚಿಸಿದ್ದೇವೆ. ನಮ್ಮ ನೌಕರರ ತುಟ್ಟಿ ಭತ್ಯವನ್ನು ಕೇಂದ್ರ ಸರ್ಕಾರದ ನೌಕರರ ತುಟ್ಟಿ ಭತ್ಯದ ಮಟ್ಟಕ್ಕೆ ತರಬೇಕೆಂದು ಮತ್ತು ಮದ್ರಾಸ್ ಸರ್ಕಾರದವರು ಅಲ್ಲಿರತಕ್ಕ ನೌಕರರ ತುಟ್ಟಿ ಭತ್ಯದಷ್ಟೇ ನಾವೂ ಸಹಾ ಇಲ್ಲಿ ನಮ್ಮ ನೌಕರರಿಗೆ ಕೊಡತಕ್ಕ ಬಗ್ಗೆ ಆ ನಿಲುವನ್ನು

ನಾವು ಅನುಸರಿಸಿದ್ದರಿಂದ ನಮ್ಮ ಸರ್ಕಾರಕ್ಕೆ ಈ ಬಾಬಿನಲ್ಲಿ ಮೊದಲಿಗಿಂತ ಒಂಭತ್ತು ಕೋಟಿ ರೂಪಾಯಿಗಳು ಹೆಚ್ಚು ಖರ್ಚಾಗುತ್ತಿದೆ. ಆದರೆ ಅವರ ಸಮಸ್ಯೆ ನಮಗೆ ಗೊತ್ತಿಲ್ಲವೆಂದಲ್ಲ.

4-00 P.M.

ಮತ್ತು ನಿನ್ನೆ ನಾನು ಮೇಲ್‌ಮನೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಈ ತೊಂದರೆ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಗಳ ಸಲಹೆಯನ್ನೂ ಕೂಡ ಪಡೆಯದೆ ತಾವಾಗಿಯೇ ಏಕಪಕ್ಷೀಯವಾಗಿ ತಮ್ಮ ನೌಕರರ ಸಂಬಳ ಸಾರಿಗೆ ವಿಚಾರವಲ್ಲಿ ಆಗಾಗ ಪುನರ್ವಿಮರ್ಶೆ ಮಾಡುತ್ತಾ ಇರುವುದರಿಂದ ಮತ್ತಷ್ಟು ಹೆಚ್ಚಾದಂತೆ ನಮಗೆ ಭಾಸವಾಗುತ್ತಾ ಇದೆ. ನಮ್ಮ ರಾಜ್ಯ ಸರ್ಕಾರದ ನೌಕರರು ಮತ್ತು ಕೇಂದ್ರ ಸರ್ಕಾರದ ನೌಕರರು ಒಂದೇ ಪ್ರದೇಶದಲ್ಲಿ, ಒಂದೇ ಸ್ಥಾನದಲ್ಲಿ, ಒಂದೇ ವಾತಾವರಣದಲ್ಲಿ ಇದ್ದು ಕೆಲಸ ಮಾಡುತ್ತಾ ಇರುವುದರಿಂದ ಮತ್ತು ಕೆಲಸ ಮಾಡುವುದೂ ಕೂಡ ಒಂದೇ ಬಗೆಯಾಗಿರುವುದರಿಂದ ಅವರಿಗೆ ಸಿಕ್ಕತಕ್ಕ ಸಂಬಳ ಸಾರಿಗೆಯಲ್ಲಿ ವ್ಯತ್ಯಾಸ ಇರತಕ್ಕದ್ದು ಸಾಧುವೂ ಅಲ್ಲ, ನ್ಯಾಯವೂ ಅಲ್ಲ. ಈ ವಿಚಾರವನ್ನು ನಾವು ಕೇಂದ್ರ ಸರ್ಕಾರದ ಹತ್ತಿರ ಪ್ರಸ್ತಾಪ ಮಾಡಿದ್ದೇವೆ. ಮತ್ತು ಹಿಂದೆ ಅವರು ಮಾಡಿದಂತಹ ಏಕ ಪಕ್ಷೀಯವಾದ ನಿರ್ಣಯದ ವಿರುದ್ಧವಾಗಿ ಪ್ರತಿಭಟನೆಯನ್ನೂ ಮಾಡಿದ್ದೇವೆ. ಬಹುಶಃ ಇನ್ನು ಮುಂದೆ ಕೇಂದ್ರ ಸರ್ಕಾರದವರು ಅಂತಹ ನಿರ್ಣಯವನ್ನು ತೆಗೆದುಕೊಳ್ಳಲಾರರು ಎಂದು ನಾನು ಆಶೆ ಮಾಡುತ್ತೇನೆ. ಈಗ ಕಳೆದ 8 ವರ್ಷದ ಅವಧಿಯಲ್ಲಿ ನಮ್ಮ ಹೊಸ ಮೈಸೂರು ರಾಜ್ಯ ಸ್ಥಾಪನೆಯಾದ ಮೇಲೆ ಈಗಾಗಲೇ ನಾವು 5 ಬಾರಿ ನಮ್ಮ ಸರ್ಕಾರಿ ನೌಕರರಿಗೆ ಪರಿಹಾರವನ್ನು ಕೊಟ್ಟಿದ್ದೇವೆ. 1957ರಲ್ಲಿ ಒಂದು ಸಲ, 61ರಲ್ಲಿ ಒಂದು ಸಲ ಇದರ ಪುನರ್ವಿಮರ್ಶೆ ಮಾಡಿ ಅವರಿಗೆ ಹೆಚ್ಚಿನ ಸಂಬಳ ಸಾರಿಗೆ ವ್ಯವಸ್ಥೆಯನ್ನು ಮಾಡಿದ್ದೇವೆ. ಮತ್ತು 63—64ರಲ್ಲೂ ಕೂಡ ಪರಿಹಾರವನ್ನು ಕೊಟ್ಟಿದ್ದೇವೆ. 1965ರಲ್ಲಿ ಎರಡು ಬಾರಿ ತುಟ್ಟಿಭತ್ಯದ ಹೆಚ್ಚಳಿಕೆ ಮಾಡಿದ್ದೇವೆ. ಇಷ್ಟು ಮಾಡಿದ ಮೇಲೂ ಕೂಡ ಅವರ ಕೆಲವೊಂದು ಬೇಡಿಕೆಗಳು ಇನ್ನೂ ಇವೆ. ಆದರೆ ನಾವು ವಿಷಾದದಿಂದ ಹೇಳಬೇಕಾಗಿದೆ. ಇಂದಿನ ಸಮಯದಲ್ಲಿ ಸರ್ಕಾರದ ಶಕ್ತಿ, ಈಗ ಏನು ಕೊಡುತ್ತಾ ಇದ್ದೇವೆಯೋ ಅದಕ್ಕಿಂತ ಹೆಚ್ಚಿಗೆ ಕೊಡುವುದಕ್ಕೆ ಸಮರ್ಥವಾಗಿಲ್ಲ. ಸರ್ಕಾರಿ ನೌಕರರಲ್ಲಿ ಸ್ವಲ್ಪಮಟ್ಟಿಗೆ ಅತೃಪ್ತಿ ಇರಬೇಕು ಎನ್ನುವಂತಹ ಮಾತು ನಿಜ. ಆದರೆ ಅವರೂ ಕೂಡ ಸರ್ಕಾರದ ಶಕ್ತಿ ಎಷ್ಟು, ಸರ್ಕಾರದ ರಿಸೋರ್ಸ್‌ಸ್ ಎಷ್ಟು ಮತ್ತು ಈಗಿರತಕ್ಕ ಶಕ್ತಿಯಲ್ಲಿ ಸರ್ಕಾರ ತಮ್ಮ ಶಕ್ತಿಗನುಗುಣವಾಗಿ ಈ ಸೌಕರ್ಯವನ್ನು ಕೊಟ್ಟಿದ್ದಾರೆಯೋ ಇಲ್ಲವೇ ಎಂಬುದನ್ನು ಅವರು ನೋಡಬೇಕು. ನಾನು ಆಶೆ ಮಾಡುತ್ತೇನೆ ಈಗಿನ ಈ ತುರ್ತು ಪರಿಸ್ಥಿತಿ ಮತ್ತು ಇನ್ನಿತರ ಸಮಸ್ಯೆಗಳನ್ನು ನೋಡಿ ನಮ್ಮ ಸರ್ಕಾರಿ ನಾನ್ ಗೆಜೆಟೆಡ್ ನೌಕರರು ತಮ್ಮ ಡಿಮ್ಯಾಂಡುಗಳನ್ನು ಮುಂದುವರಿಸುವುದಿಲ್ಲ ಮತ್ತು ಇನ್ನು ಮುಂದೆ ಯಾವಾಗ ಸರ್ಕಾರಕ್ಕೆ ಸಾಧ್ಯವಾಗುತ್ತದೆಯೋ ಆಗ ಪುನಃ ಅವರ ಪ್ರಶ್ನೆಯನ್ನು ಸಹಾನುಭೂತಿ ಪೂರ್ವಕವಾಗಿ ಬಿಡಿಸುವುದರಲ್ಲಿ ಸರ್ಕಾರ ಉತ್ಸುಕವಾಗಿದೆ ಎಂದು ಹೇಳ ಬಯಸುತ್ತೇನೆ.

ಇನ್ನು ಸರ್ಕಾರದ ವಿವಿಧ ಖಾತೆಗಳ ಖರ್ಚಿನಲ್ಲಿ ಕಡಿಮೆಯಾಗಬೇಕೆಂಬುದನ್ನು ಕೆಲವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಯಾವ ತರಹದ ಭಿನ್ನಾಭಿಪ್ರಾಯವೂ ಇಲ್ಲ. ನಾನು ಕಳೆದ ಒಂದು ತಿಂಗಳ ಹಿಂದೆ ನಮ್ಮ ಸರ್ಕಾರದ ಬೇರೆ ಬೇರೆ ವಿಭಾಗದ ಸೆಕ್ರೆಟರಿಗಳು ಮತ್ತು ಆಡಳಿತದ ಮುಖ್ಯ ಅಧಿಕಾರಿಗಳನ್ನು ಕರೆದು ಒಟ್ಟು ಈ ವರ್ಷದ ಅವಧಿಯಲ್ಲಿ ಒಂದು ಕೋಟಿ ರೂಪಾಯಿಗಳಷ್ಟನ್ನು ಮಿತವ್ಯಯ ಮಾಡಿ ಉಳಿಸಬೇಕೆಂದು ಹೇಳಿ ತೀರ್ಮಾನ ಮಾಡಿದ್ದೇವೆ. ಈಗ ಕೆಲವು ಸಂದರ್ಭಗಳಲ್ಲಿ ನಾವು ಸಿಬ್ಬಂದಿಯನ್ನು ಹೆಚ್ಚು ಮಾಡಕೂಡದು ಎಂದು ನಿರ್ಣಯ ಮಾಡಿದ್ದರೂ ಕೂಡ ಅದನ್ನು ನಿಲ್ಲಿಸುವಂತಹ ಸಂದರ್ಭ ಬರುತ್ತದೆ. ಉದಾಹರಣೆಗೆ ಕೇಂದ್ರ ಸರ್ಕಾರದಿಂದ ಹೊಸ ಹೊಸದಾಗಿ, ಕ್ರ್ಯಾಷ್‌ಪ್ರೋಗ್ರಾಂ ಆಗಲಿ ಅಥವಾ ಇನ್ನಿತರ ಅವರಿಂದ ಸಹಾಯ ದೊರೆಯತಕ್ಕ ಪ್ರೋಗ್ರಾಂಗಳಾಗಲಿ ಸೂಚಿತವಾದರೆ ಅವರಿಂದ ಹಣ ಸಿಕ್ಕುತ್ತದೆ. ಅವಕ್ಕೆ ಸಿಬ್ಬಂದಿ ಸೌಕರ್ಯವನ್ನು ಒದಗಿಸದಿದ್ದರೆ ಆ ಹಣ ಲ್ಯಾಪ್ಸ್ ಆಗುತ್ತದೆ, ಅದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ನಾವು ಒಂದು ಮಾರ್ಗ ಹುಡುಕಿದ್ದೇನೆ ಅದೇನೆಂದರೆ, ಪ್ರತಿಯೊಂದು ಡಿಪಾರ್ಟ್‌ಮೆಂಟಿನಲ್ಲೂ ನೂರಕ್ಕೆ ಹತ್ತರಷ್ಟು ಸಿಬ್ಬಂದಿ ಮತ್ತು ಇನ್ನಿತರ ಖರ್ಚಿನಲ್ಲಿ ಉಳಿತಾಯವಾಗಬೇಕು. ಮುಖ್ಯವಾಗಿ ಅದರಲ್ಲಿ ನೂರಕ್ಕೆ ಐದರಷ್ಟು ಸಿಬ್ಬಂದಿಯನ್ನಾದರೂ ಕಡಮೆ ಮಾಡಿ ಉಳಿತಾಯ ಮಾಡಬೇಕು. ಮತ್ತು ಉಳಿತಾಯ ಮಾಡಿದಂತಹ ಸಿಬ್ಬಂದಿಯ ಒಂದು ಸರ್‌ಪ್ಲಸ್ ಪೂಲ್ ಮಾಡಬೇಕು. ಹೊಸ ಎಸ್ಟ್ಯಾಬ್ಲಿಷ್‌ಮೆಂಟ್ ಮಾಡುವುದು ಆಗಲಿ, ಹೊಸ ಡಿಪಾರ್ಟ್‌ಮೆಂಟನ್ನು ಸ್ಥಾಪನೆ ಮಾಡುವುದಾಗಲಿ ಅವಕ್ಕೆ ಸರ್‌ಪ್ಲಸ್ ಪೂಲಿನಿಂದ ಸಿಬ್ಬಂದಿಯನ್ನು ಡ್ರಾ ಮಾಡಬೇಕೆನ್ನುವಂತಹದು ಆ ನಿರ್ಣಯ. ಇದು ಒಂದು ಬಹಳ ದೊಡ್ಡ ಸಮಸ್ಯೆ. ಒಂದೇ ಸಲ ಒಂದೆರಡು ತಿಂಗಳ

(ಶ್ರೀ ರಾಮಕೃಷ್ಣ ಹೆಗ್ಗಡೆ)

ನಲ್ಲಿ ಕೈಗೂಡುವುದಲ್ಲ, ಲಕ್ಷಾಂತರ ನೌಕರರು ಇರತಕ್ಕ ನಮ್ಮದು ಒಂದು ದೊಡ್ಡ ಸಂಸ್ಥೆ ಇರುವುದರಿಂದ ಕ್ರಮೇಣವಾಗಿ ಉಳಿತಾಯವನ್ನು ಸಾಧಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವಂತಹ ವಿಷಯವನ್ನು ನಾನಿಲ್ಲಿ ಪ್ರಸ್ತಾಪಮಾಡಬಯಸುತ್ತೇನೆ.

ಇನ್ನು ಎರಡು ಮೂರು ಜನ ಮಾನ್ಯ ಸದಸ್ಯರು ಹೊಸದಾಗಿ ನಾವು ಮಾಡಿದಂತಹ ಚೀಫ್ ಇಂಜನಿಯರ್ ಇನ್‌ವೆಸ್ಟಿಗೇಷನ್ ಎಂದು ಏನಿದೆ ಇದು ಅನಾವಶ್ಯಕವಾಗಿತ್ತು ಎಂದು ಹೇಳಿದ್ದಾರೆ. ಅವರ ಗಮನಕ್ಕೆ ಒಂದು ವಿಚಾರವನ್ನು ತರಲು ಬಯಸುತ್ತೇನೆ. ಇದು ಒಂದು ಬಹಳ ದೊಡ ಇಲಾಖೆಯಲ್ಲ. ಈಗಾಗಲೇ ಮೇಜರ್ ಇನ್‌ವೆಸ್ಟಿಗೇಷನ್ ಸರ್ಕಲ್ ಎಂದು ಹೇಳಿ ಮೈಸೂರಿನಲ್ಲಿ ಒಂದು ಇದೆ, ಅದಕ್ಕೆ ಸೂಪರಿಂಟೆಂಡಿಂಗ್ ಇಂಜನಿಯರು ಮತ್ತು ಇನ್ನಿತರ ಸಿಬ್ಬಂದಿ ಇದೆ. ಅದರಂತೆ ಇರಿಗೇಷನ್ ಇನ್‌ವೆಸ್ಟಿಗೇಷನ್ ಸರ್ಕಲ್ ಗುಲ್ಬರ್ಗ ಅನ್ನುವಂತಹದು ಇದೆ. ಅದಕ್ಕೂ ಒಬ್ಬ ಸೂಪರಿಂಟೆಂಡಿಂಗ್ ಇಂಜನಿಯರು ಮತ್ತು ಇನ್ನಿತರ ಸಿಬ್ಬಂದಿಯವರು ಇದ್ದಾರೆ. ಧಾರವಾಡದಲ್ಲಿ ಇರಿಗೇಷನ್ ಇನ್‌ವೆಸ್ಟಿಗೇಷನ್ ಸರ್ಕಲ್ ಅಂತ ಇದೆ, ಅಲ್ಲೂ ಕೂಡ ಎಲ್ಲಾ ಸಿಬ್ಬಂದಿ ಇದೆ. ಅದರ ಜೊತೆ ಇನ್ನೂ ಎರಡು ಐಟಂ ಸೇರುತ್ತದೆ. ಈಗ ಹೊಸದಾಗಿ ಇಲ್ಲಿ ಕೊಡತಕ್ಕದ್ದು ಕೇವಲ ಒಂದು ಚೀಫ್ ಇಂಜನಿಯರ ಪೋಸ್ಟು ಮತ್ತು ಇತರ ನಾನ್ ಗೆಜೆಟೆಡ್ ನೌಕರರ ಪೋಸ್ಟು. ಇದು ಏಕೆ ಅಗತ್ಯ ಎಂದರೆ, ಬೇರೆ ಬೇರೆ ಕಡೆ ಈಗ ಮೈನರ್ ಇರಿಗೇಷನ್, ಮೇಜರ್ ಇರಿಗೇಷನ್ ಇವುಗಳ ಇನ್‌ವೆಸ್ಟಿಗೇಷನ್ ನಡೆಯುತ್ತಾ ಇದೆ. ಅವುಗಳನ್ನೆಲ್ಲಾ ಕೋಆರ್ಡಿನೇಟ್ ಮಾಡತಕ್ಕ ಮತ್ತು ಯಾವುದಾದರೂ ಒಂದು ಸಂದರ್ಭ ಬಂದಾಗ ಅವರ ವಿಚಾರದಲ್ಲಿ ಸ್ಪಷ್ಟವಾದ ಅಭಿಪ್ರಾಯ ಹೇಳತಕ್ಕಂತಹ ಚೀಫ್ ಇಂಜನಿಯರು ಇರಲಿಲ್ಲ, ಅದು ಅಗತ್ಯ. ಮಾನ್ಯ ಗೋಪಾಲಗೌಡರು ಕೇಂದ್ರದಿಂದ ಅಕಸ್ಮಾತ್ತಾಗಿ ಯಾವುದಾದರೂ ಹಣವನ್ನು ಮಂಜೂರು ಮಾಡಿದರೆ ಅದಕ್ಕೆ ಬೇಕಾದ ಸಿದ್ಧತೆಯನ್ನು ಮಾಡಿಕೊಳ್ಳುವುದಿಲ್ಲ ಎಂದು ಹೇಳಿದರು. ಅನೇಕ ಸಂದರ್ಭದಲ್ಲಿ ಅಂತಹ ಪ್ರಸಂಗ ಉಂಟು. ಏಕೆಂದರೆ ಕೆಲವು ಸ್ಕೀಂಗಳನ್ನು ನಾವು ಇನಿಷಿಯೇಟ್ ಮಾಡುವುದಕ್ಕೆ ಸಾಧ್ಯವಿಲ್ಲ, ಕೇಂದ್ರ ಸರ್ಕಾರದವರು ಕೊನೇ ಘಳಿಗೆಯಲ್ಲಿ—ಫೆಬ್ರವರಿಯಲ್ಲಿ—ಕೋಟ್ಯಾಂತರ ರೂಪಾಯಿಗಳನ್ನು ಮಂಜೂರು ಮಾಡುತ್ತಾರೆ. ಅದನ್ನು ಖರ್ಚು ಮಾಡುವುದಕ್ಕೆ ಸಿಬ್ಬಂದಿ ಮತ್ತು ಇನ್ನಿತರ ವ್ಯವಸ್ಥೆ ಮಾಡಿಕೊಳ್ಳುವುದು ಅಗತ್ಯ. ಆದ್ದರಿಂದ ಇದು ಒಂದು ಅಗತ್ಯವಾದಂತಹ ಕೆಲಸವಾಗಿದೆ. ಈ ಖರ್ಚು ಅನಾವಶ್ಯಕ ಎಂದು ಹೇಳಿ ನಾವು ಭಾವಿಸುವುದಿಲ್ಲ.

ಶ್ರೀಮಾನ್ ಗೋಪಾಲಗೌಡರು, ಶ್ರೀಮಾನ್ ಕೆ. ವಿ. ಪುಟ್ಟಪ್ಪನವರಿಗೆ ಯಾವ ರೀತಿ ಹಣ ಕೊಡಲು ಒಂದು ಅವಕಾಶವನ್ನು ಮಾಡಿದ್ದೇವೆಯೋ ಅದೇ ರೀತಿ ಇನ್ನಿತರ ಅನೇಕ ಪ್ರಖ್ಯಾತವಾದಂತಹ ಕವಿಗಳು ಕರ್ಣಾಟಕದಲ್ಲಿ ಇದ್ದಾರೆ ಅವರಿಗೂ ಕೂಡ ಅಂತಹ ಗೌರವ ಕೊಡಬೇಕೆಂದು ಹೇಳಿದರು. ಆ ಸೂಚನೆ ಅತ್ಯಂತ ಸ್ವಾಗತಾರ್ಹವಾದದ್ದು ಮತ್ತು ಅದು ಸರ್ಕಾರದ ಗಮನದಲ್ಲಿ ಇದೆ. ಬೇರೆ ಬೇರೆ ಕಾಲದಲ್ಲಿ ನಾವು ಅತಿ ಯೋಗ್ಯರಾದ ಮತ್ತು ಕನ್ನಡದ ನಾಡಿಗೆ ಸೇವೆ ಸಲ್ಲಿಸಿದಂತಹ ಬೇರೆ ಬೇರೆ ಲೇಖಕರನ್ನು ಮತ್ತು ಸಾಹಿತಿಗಳನ್ನು ಗೌರವಿಸುತ್ತೇವೆ. ಇದು ಸರ್ಕಾರದ ಇಚ್ಛೆಯಾಗಿದೆ ಎಂಬುದನ್ನು ನಾನಿಲ್ಲಿ ಹೇಳಬಿಚ್ಛಿಸುತ್ತೇನೆ.

ಇನ್ನು ಹೆಚ್ಚು ಮಾತನಾಡತಕ್ಕ ಅಗತ್ಯ ಇಲ್ಲ. ಯಾವುದು ಅನಿರೀಕ್ಷಿತವಾಗಿ ಹೊಸದಾಗಿ ಖರ್ಚು ಮಾಡತಕ್ಕ ಪ್ರಸಂಗ ಇವೆಯೋ ಅವರ ಬಗ್ಗೆ ಈ ಸಪ್ಲಿಮೆಂಟರಿ ಬೇಡಿಕೆಯನ್ನು ಸಭೆಯ ಮುಂದೆ ತರುತ್ತೇವೆ. ಇದಕ್ಕಿಂತ ಇನ್ನು ಹೆಚ್ಚು ಹೇಳಬೇಕಾದ ಅಗತ್ಯ ಇಲ್ಲ, ಮಾನ್ಯ ಸಭೆ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ನನ್ನ ಪ್ರಾರ್ಥನೆ.

Sri B. R. SUNTHANKAR.—The Public Accounts Committee made some recommendations in respect of M. S. K. Mills. It is a losing concern and the losses in three years are 9 to 10 lakhs per year. The Public Accounts Committee has recommended, that the Government should not make any further financial commitments to this Mill, except after a thorough examination and unless it becomes absolute owner of the majority of the shares. I want to know whether the Government has taken into consideration this recommendation and whether they will propose to become absolute owners of 51 per cent of the shares ?

Sri RAMAKRISHNA HEGDE.—Sir, the investment—that has been made in M.S.K. Mills was primarily to see that the 3,000 and odd labourers engaged in that industry were not thrown out of job and it is one of the duties of the State Government to see that whenever there is a likelihood of lock up or closure of a big industry to step in so that the large number of workers are not unemployed. I agree that so far as the financial position is concerned, it is not quite happy. The Government is seriously considering what best course should be adopted either to revitalise the industry or to find any other way suitable.

Sri G. V. GOWDA.—Does the Minister know that most of the investment has gone to discharge the debts incurred by M.S.K. Mills ?

Sri RAMAKRISHNA HEGDE.—I know everything connected with finance so far as that industry is concerned.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಮೂರು ದಿವಸಗಳಿಂದ ಆಹಾರದ ಮೇಲೆ ಚರ್ಚೆ ನಡೆದು ಪಂಪ್ ಸೆಟ್ಸ್, ಇರಿಗೇಷನ್ ವೆಲ್ಸ್ ಹೆಚ್ಚಾಗಿ ಜನಗಳಿಗೆ ಒದಗಿಸಬೇಕೆಂದು ಕೇಳಿದ್ದಾಯಿತು. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಿಂದ ಸಾಲ ಕೊಡುತ್ತೇವೆಂದು ಹೇಳಿದರು, ಇವು ಯಾವುವೂ ಈ ಸಪ್ಲಿಮೆಂಟ್ ಡಿಮಾಂಡ್ಸ್‌ನಲ್ಲಿ ಕಾಣುತ್ತಾ ಇಲ್ಲ.

Mr. SPEAKER.—In the next supplementary Demands, there will be plenty of provision for pumpsets.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮದ್ರಾಸ್‌ನಲ್ಲಿ ಎಷ್ಟು ಜನ ಚೀಫ್ ಇಂಜಿನಿಯರ್ಸ್ ಇದ್ದಾರೆ? ಆಂಧ್ರದಲ್ಲಿ ಎಷ್ಟು ಜನ ಇದ್ದಾರೆ ? ಇಲ್ಲಿ ಇರುವ ಚೀಫ್ ಇಂಜಿನಿಯರ್ರಿಗೆ ಕೆಲಸ ಸಾಕಾದಷ್ಟು ಇಲ್ಲ. ಈಗ ಇನ್ನೊಬ್ಬ ಹೊಸ ಚೀಫ್ ಇಂಜನಿಯರ್ ಯಾತಕ್ಕೆ ಸ್ವಾಮೀ ? ಯಾರಾದರೂ ಸಂಬಂಧಿಕರಿದ್ದಾರೆಯೇ ?

Mr. SPEAKER.—There was necessity. Therefore it was done. Now I will put the Demands to the House. The question is :

> " That the further sums not exceeding the amounts shown in the list of demands for supplementary and additional demands for grants for the year 1965-66 (I Instalment) circulated to members be granted to Government to defray the charges which will come in course of payment during the year ending with 31st day of March 1966 in respect of Demands Nos. 5, 10, 13, 17, 20, 22, 23, 24, 25, 26, 31, 39, 44, 48 and 54.

(*The motion was adopted*)

[*As directed by the Chair, the Motions for Demands for Grants adopted by the House are reproduced below.*]

DEMAND NO. 5.—SALES TAX—ADMINISTRATION.

12. Sales Tax

" That a further sum not exceeding Rs. 7,78,000 be granted to the Government to defray the charges which will come in course of payment during the financial year for the period ending 31st day of March 1966, in respect of Sales Tax'."

DEMAND No. 10.—GENERAL ADMINISTRATION.

19. General Administration.

" That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1966, in respect of 'General Administration.'."

DEMAND No. 13.—POLICE.

23. Police.

" That a further sum not exceeding Rs. 200 be granted to the Government to defray the charges which will come in course of payment during the financial year for the period ending 31st day of March 1966, in respect of 'Police'."

DEMAND No. 17.—EDUCATION.

28. Education.

" That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1966, in respect of 'Education'."

DEMAND No. 20.—AGRICULTURE, HORTICULTURE AND FISHERIES.

31. Agriculture

" That a further sum not exceeding Rs. 43,36,300 be granted to the Government to defray the charges which will come in course of payment during the financial year for the period ending 31st day of March 1966, in respect of 'Agriculture'."

DEMAND No. 22.—ANIMAL HUSBANDRY.

33. Animal Husbandry.

" That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1966, in respect of 'Animal Husbandry'."

DEMAND No. 23.—CO OPERATION.

34. Co-operation.

" That a further sum not exceeding Rs. 200 be granted to the Government to defray the charges which will come in course

of payment during the financial year for the period ending 31st day of March 1966, in respect of 'Co-operation'."

DEMAND No. 24.—INDUSTRIES INCLUDING SERICULTURE.

35. Industries.

"That a further sum not exceeding Rs. 200 be granted to the Government to defray the charges which will come in course of payment during the financial year for the period ending 31st day of March 1966, in respect of 'Industries'."

DEMAND No. 25.—COMMUNITY DEVELOPMENT, ETC.

37. Community Development Projects, National Extension Service and Local Development Works.

"That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1966, in respect of 'Community Development Projects, National Extension Service and Local Development Works'."

DEMAND No. 26.—LABOUR AND EMPLOYMENT.

38. Labour ana Employment.

"That a further sum not exceeding Rs. 100 be granted to the Government to defray the charges which will come in course of payment during the finanical year for the period ending 31st day of March 1966, in respect of 'Labour and Employment'."

DEMAND No. 31.—PUBLIC WORKS.

50. Public Works.

"That a further sum not exceeding Rs. 600 be granted to the Government to defray the charges which will come in course of payment during the financial year for the period ending 31st day of March 1966, in respect of 'Public Works'."

DEMAND No. 39.—MISCELLANEOUS.

71. Miscellaneous.

"That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1966, in respect of 'Miscellaneous'."

DEMAND No. 44.—INDUSTRIAL AND ECONOMIC DEVELOPMENT.

96. Capital Outlay on Industrial and Economic Development

"That a further sum not exceeding Rs. 300 be granted to the Government to defray the charges which will come in course

of payment during the financial year for the period ending 31st day of March 1966, in respect of 'Capital Outlay on Industrial and Economic Development'."

DEMAND NO. 48.—CAPITAL OUTLAY ON PUBLIC WORKS.

103. Capitat Outlay on Public Works.

"That a further sum not exceeding Rs. 19,35,000 be granted to the Government to defray the charges which will come in course of payment during the financial year for the period ending 31st day of March 1966, in respect of 'Capital Outlay on Public Works'."

DEMAND NO. 54.—ADVANCES AND LOANS.

Q. Loans and Advances by State Union/Territory Governments.

"That a further sum not exceeding Rs. 47,21,447 be granted to the Government to defray the charges which will come in course of payment during the financial year for the period ending 31st day of March 1966, in respect of 'Loans and Advances by State/Union Territory Governments'."

Mr. SPEAKER.—If members are desirous of going tomorrow evening, I would see if it is possible. If it is not possible, it may be necessary to sit on the 22nd. First of all I would indicate the order in which work would be taken up tomorrow. Fiscal Bills and Bills replacing ordinances have to be finished and they cannot possibly be postponed. This is the order:

1 Mysore Sale of Motor Spirit Taxation Amendment Bill, 1965
2 Mysore Sales Tax (Amendment) Bill, 1965
3 Mysore Contingency Fund (Amendment) Bill, 1965
4 Mysore Irrigation (Levy of Betterment Contribution and Water Rate) (Amendment) Bill, 1965.
5 Mysore Motor Vehicles Taxation (Amendment) Bill, 1965
6 Mysore Local Authorities (Postponement of Elections and Continuance of Administrators) Bill, 1965.
7 Resolution under Rule 122 by Sri Gopala Gowda, Mysore State Civil Services Class III Posts Recruitment (Validation) Bill, 1965.
8 Mysore Maternity Benefit Repealing Bill, 1965
9 Channarayapatna (Alteration of Limits) Validation Bill, 1965
10 City of Bangalore Corporation (Amendment) Bill, 1965
11 Bangalore Water Supply and Sewerage (Amendment) Bill, 1965.

Sri Gopala Gowda has given notice of resolution saying that the principle contained in the ordinance is repugnant and should be rejected.

That will be debated along with the Bill and the Resolution will be first put to vote and the Bill relating to that will be taken up depending upon the result of the resolution.

ಶ್ರೀ ಎಸ್. ಗೋಪಾಲ ಗೌಡ.—ಈ ಸಭೆಯ ಮುಂದೆ ಯಾವ ಯಾವ ವಿಧೇಯಕಗಳನ್ನು ಚರ್ಚೆ ಮಾಡಿ ಮುಗಿಸಬೇಕು ಎನ್ನುವ ಒಂದು ಪಟ್ಟಿಯನ್ನು ಇಟ್ಟಿದ್ದೀರಿ, ಅದನ್ನು ಗಮನಿಸಿ ನೋಡಿದರೆ ಹಬ್ಬಕ್ಕೆ ಹೋಗುವವರಿಗೆ ಅನುಕೂಲವಾಗುವಂತೆ 21ನೇ ತಾರೀಖು ಮುಗಿಸಿ, ಅವರು ಹೋಗಿ ಪುನಃ ಸಭೆ ಸೇರಿದರೆ ಒಂದು ವಾರದ ಕೆಲಸ ಇದೆ. ಇದನ್ನು ತಾವು ಯೋಚನೆ ಮಾಡಿ ನೋಡಿ.

Mr. SPEAKER.—I am taking up this matter now in detail because I have to issue the agenda for tomorrow. Do the members want to sit in the morning tomorrow ?

Sri RAMAKRISHNA HEGDE.—I would suggest that we sit today for one hour more, till seven, because many Hon'ble Members are desirous of leaving this place tomorrow. But in view of the work before us, I suggest that if possible, tomorrow also, we may sit for at least six hours both in the morning and evening and that would enable us to finish the agenda. Otherwise, we can sit day-after tomorrow in the morning.

Mr. SPEAKER.—What about questions ?

Sri RAMAKRISHNA HEGDE.—We can skip over questions and take them up next time.

Sri S. SIVAPPA.—We want questions, Sir.

Sri V. S. PATIL (Belgaum-I).—I think the suggestion made by my friend Sri Gopala Gowda appears to be very reasonable. Even the list read out by the Chair is fairly large and they are bills which are necessary to be passed and I do not think that we will be able to finish the work within a day or two.

Mr. SPEAKER.—According to the Hon'ble Member, what is the time required ? The Business Advisory Committee has dealt with it. It does not come anywhere near what Sri Gopala Gowda said.

Sri V. S. PATIL.—Even though we have given the time limit in the Business Advisory Committee, eventually the time-limit has always been relaxed on the floor of the House. In every case almost, we have done it. For instance, the time allotted to the Supplementary Demands was only one hour. But it took nearly two hours. Besides, the Bills that are before us, some of them are controversial in nature. So, if the Hon'ble Members are anxious to go, let them go tomorrow. The Meeting may be adjourned up to Monday and on Monday or Tuesday we may sit again.

Sri RAMAKRISHNA HEGDE.—Sir, we may sit tomorrow the whole day and day after tomorrow morning.

Mr. SPEAKER.—Let us see. We will decide about tomorrow. We will meet tomorrow morning at 8-30 A.M. and Questions Hour will be there.

Sri S. SIVAPPA.—Sir, in view of the number of bills that are there before us, I feel that the time allotted by the Business Advisory Committee will not be sufficient. There are some controversial Bills. If they want to finish the agenda, even tomorrow and day-after will not be sufficient.

Mr. SPEAKER.—I understand the sense of the House. We may go to the next item. I have given the agenda for tomorrow. We are meeting at 8-30 A.M. tomorrow with Question-Hour retained. There may be no Teabreak.

The House will now take up the Mysore Sales of Motor Spirit Taxation (Amendment) Bill, 1965.

Sri H. R. KESHAVA MURTHY.—Sir, should we not read the Bills? This is not in the order paper or agenda supplied to us.

Mr. SPEAKER.—The House has got the right to take up any business.

MYSORE SALES OF MOTOR SPIRIT TAXATION (AMENDMENT) BILL, 1965.

Motion to consider.

Sri RAMAKRISHNA HEGDE.—Sir, I move :

"That the Mysore Sales of Motor Spirit Taxation (Amendment) Bill, 1965, be taken into consideration."

Mr. SPEAKER.—Motion moved :

"That the Mysore Sales of Motor Spirit Taxation (Amendment) Bill, 1965, be taken into consideration."

Sri K. S. SURYANARAYANA RAO (Mysore City).—I have a point of order, Sir. My point of order is one that we normally raised on all previous occasions also. This is a taxation measure which should have been accompanied by a financial memorandum. I am only sorry that no financial memorandum accompanies this Bill, at any rate the copy of the Bill in my hands does not contain it. It has been the practice and convention to have the financial memorandum in such cases and therefore it is but right that we should have the financial memorandum.

Mr. SPEAKER.—When extra expenditure is incurred, the financial statement is necessary.

Sri K. S. SURYANARAYANA RAO.—Even there, you should have said there is no extra expenditure involved.

Mr. SPEAKER.—Please state the rule or authority or Article of the Constitution on which the member is relying.

Sri K. S. SURYANARAYANA RAO.—Rules of procedure, page 22, Rule 68 :

"(1) A Bill involving expenditure shall be accompanied by a financial memorandum which shall invite particular attention to the clauses involving expenditure and shall also give an estimate of the recurring and non-recurring expenditure involved in case the Bill is passed into law."